

# ಕರ್ನಾಟಕ ಸ್ಕೌಟ್ ಮತ್ತು ಗೈಡ್

ತಿಂಗಳ ವಾರ್ತಾಪತ್ರಿಕೆ

# Karnataka Scout & Guide

Monthly News Magazine

Vol -20 | Issue-04 | April 2023 | ₹ 10/-

## ಸ್ವ-ಇಚ್ಛೆಯಿಂದ
## ನಮ್ಮ ಮತವನ್ನು ಚಲಾಯಿಸೋಣ
## ದೇಶದ ಭವಿಷ್ಯವನ್ನು ರೂಪಿಸೋಣ

## ತಪ್ಪದೇ ಮತ ಚಲಾಯಿಸಿ





ಶ್ರೀ ಪಿ ಜಿ ಆರ್ ಸಿಂಧ್ಯ , ರಾಜ್ಯಮುಖ್ಯ ಆಯುಕ್ತರು, ಕರ್ನಾಟಕ ಇವರು ಏಪ್ರಿಲ್ 24 ರಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷರಾದ ಕರ್ನಲ್ ಪ್ರೊ॥ ವೈ.ಎಸ್. ಸಿದ್ದೇಗೌಡ ರವರನ್ನು ಭೇಟಿ ಮಾಡಿ ಅಭಿನಂದನೆಗಳನ್ನು ಸಲ್ಲಿಸಿದರು. ರಾಷ್ಟ್ರೀಯ ಶಿಕ್ಷಣ ನೀತಿ 2020ರ ಪ್ರಕಾರ ಎಲ್ಲಾ ಪದವಿ ಕಾಲೇಜುಗಳ ಪಠ್ಯಕ್ರಮದಲ್ಲಿ 2ನೇ ಸೆಮಿಸ್ಟರ್ ನಿಂದ ರೋವರ್ಸ್–ರೇಂಜರ್ಸ್ ವಿಷಯವನ್ನು ಮೌಲ್ಯದಾರಿತ (Value Basesed Course) ವಿಷಯವಾಗಿ ಪರಿಚಯಿಸಿದ್ದು, ಈ ವಿಷಯವನ್ನು ಕಾಲೇಜು ಅಧ್ಯಾಪಕರು ಪರಿಣಾಮಕಾರಿಯಾಗಿ ಬೋಧಿಸಲು ಅನುಕೂಲ ವಾಗುವಂತೆ ಕಾಲೇಜುಗಳ ಅಧ್ಯಾಪಕರುಗಳಿಗೆ ವಿಶ್ವವಿದ್ಯಾ ನಿಲಯಗಳ ಮಟ್ಟದಲ್ಲಿ ಕಾರ್ಯಾಗಾರವನ್ನು ಏರ್ಪಡಿಸುವ ಬಗ್ಗೆ ಚರ್ಚಿಸಲಾಯಿತು. ಡಾ. ಎಂ. ಜಯಪ್ಪ, ವಿಶೇಷಾಧಿಕಾರಿಗಳು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಶ್ರೀ ಎಂ. ಪ್ರಭಾಕರ ಭಟ್, ರಾಜ್ಯ ಸಂಘಟನಾ ಆಯುಕ್ತರು (ಸ್ಕೌ), ಶ್ರೀಮತಿ ಕೆ.ವಿ.ಶ್ಯಾಮಲ, ರಾಜ್ಯ ತರಬೇತಿ ಆಯುಕ್ತರು (ಗೈ), ಶ್ರೀ ಎಲ್.ಟಿ. ಲೋಕೇಶ್, ರೋವರ್ ವಿಭಾಗದ ಉಸ್ತುವಾರಿ, ಶ್ರೀಮತಿ ಮಲ್ಲೇಶ್ವರಿ ಜುಜಾರೆ, ರೇಂಜರಿಂಗ್ ವಿಭಾಗದ ಉಸ್ತುವಾರಿ ಉಪಸ್ಥಿತರಿದ್ದರು.




ದಕ್ಷಿಣ ಕನ್ನಡ ಜಿಲ್ಲೆ ಹರೇಕಳದ ಶ್ರೀ ರಾಮಕೃಷ್ಣ ಅನುದಾನಿತ ಪ್ರೌಢಶಾಲೆಯಲ್ಲಿ ಏಪ್ರಿಲ್ 14ರಂದು ಸಂವಿಧಾನ ಶಿಲ್ಪಿ ಡಾ॥ ಬಿ.ಆರ್. ಅಂಬೇಡ್ಕರ್ ಜಯಂತಿ ಪ್ರಯುಕ್ತ ಸ್ಕೌಟ್ಸ್–ಗೈಡ್ಸ್‌ಗಳಿಂದ ಸರ್ವಧರ್ಮ ಪ್ರಾರ್ಥನೆಯನ್ನು ಹಮ್ಮಿಕೊಂಡು ನಿರ್ವಹಿಸಿರುವುದು.

ಬೆಳಗಾವಿ ಜಿಲ್ಲೆ ಖಾನಾಪುರದ ಮಿಲಾಗ್ರೇಸ್ ಚರ್ಚ್ ಮರಾಠಿ ಪ್ರಾಥಮಿಕ ಶಾಲೆಯಲ್ಲಿ ನಡೆದ ಸಂವಿಧಾನ ಶಿಲ್ಪಿ ಡಾ॥ ಬಿ.ಆರ್. ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಸ್ಕೌಟ್ಸ್‌ಗಳು ಮತ್ತು ಶಾಲಾ ಸಿಬ್ಬಂದಿ ವರ್ಗದವರು ಭಾಗವಹಿಸಿದುರುವುದು.



# ಕರ್ನಾಟಕ ಸ್ಕೌಟ್ ಮತ್ತು ಗೈಡ್
ಮಾಸಿಕ ವಾರ್ತಾಪತ್ರಿಕೆ

# KARNATAKA Scout & Guide
MONTHLY NEWS MAGAZINE

Vol: 20 Issue : 04 April 2023

ಒಳಪುಟಗಳಲ್ಲಿ...

ರಾಜ್ಯ ಮುಖ್ಯ ಆಯುಕ್ತರ ನುಡಿ ...04
ಚಿಂತೆ ಚಿಂತನ ...05
ವಿಶ್ವ ಮಹಿಳಾ ದಿನಾಚರಣೆ–2023 ...06
ರಾಷ್ಟ್ರೀಯ ಶಿಕ್ಷಣ ನೀತಿ (2020)ಯ ಸಭೆ (ಎನ್‌ಇಪಿ) ...07
2022–23ನೇ ಸಾಲಿನ ದ್ವಿತೀಯ ಪಿ.ಯು.ಸಿಯಲ್ಲಿ ಸಾಧನೆ ಮಾಡಿದ ಸ್ಕೌಟ್–ಗೈಡ್‌ಗಳು ...09
ಜಿಲ್ಲಾ ವಾರ್ತೆಗಳು ...11
ಬೇಸಿಗೆಯ ದಾಹ ನೀಗಿಸುವ ನೀರು ...29
ಮೇ ತಿಂಗಳ ಕಾರ್ಯಕ್ರಮ
ಶ್ರದ್ಧಾಂಜಲಿ ..30




**ಪೋಷಕರು**
ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**
ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**
ಕೊಂಡಜ್ಜಿ ಬಿ. ಷಣ್ಮುಖಪ್ಪ

**ಸಂಪಾದಕರು**
ಕೆ. ಗಂಗಪ್ಪಗೌಡ

**ಸಹಸಂಪಾದಕರು**
ಎನ್. ಶ್ರೀನಿವಾಸನ್

**ಸಂಚಾಲಕರು**
ಬಿ.ಎಸ್. ರವೀಂದ್ರ

**ಸದಸ್ಯರು**
ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಚಳ್ಳಕೆರೆ ಯರ‍್ರಿಸ್ವಾಮಿ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ಡಾ. ವಸುಂಧರ ಭೂಪತಿ
ಡಾ. ಶಕುಂತಲ
ಪ್ರಭಾವತಿ ಪಾಟೀಲ್

ಸಂಚಿಕೆಯ ವಾರ್ಷಿಕ ಚಂದಾ ರೂ. 100/–
ವಿದ್ಯಾಸಂಸ್ಥೆ ಹಾಗೂ ಸಂಘ–ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/–

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು – 560 001
ಇಲ್ಲಿಗೆ ಕಳುಹಿಸಲು ಕೋರಿದೆ.



# ರಾಜ್ಯ ಮುಖ್ಯ ಆಯುಕ್ತರ ನುಡಿ

**ಸಮಸ್ತ ಸ್ಕೌಟ್ಸ್ ಮತ್ತು ಗೈಡ್ಸ್ ಬಂಧುಗಳಿಗೆ ಶುಭಾಶಯಗಳು,**

ರಾಜ್ಯದಲ್ಲಿ ವಿಧಾನಸಭಾ ಚುನಾವಣೆಗಳ ಪ್ರಕ್ರಿಯೆಗಳು ಪ್ರಾರಂಭವಾಗಿದೆ. ಈ ಹಿಂದಿನ ಹಲವಾರು ಸಂದರ್ಭಗಳಲ್ಲಿ ಸ್ಕೌಟ್ಸ್–ಗೈಡ್ಸ್‌ಗಳು ಸಲ್ಲಿಸಿರುವ ಸೇವೆಗಳಿಂದ ಆಕರ್ಷಿತರಾಗಿರುವ ಹಲವು ಜಿಲ್ಲಾಧಿಕಾರಿಗಳು, ಮತದಾರರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳಿಗೆ ಮತ್ತು ಮತಗಟ್ಟೆಗಳ ಬಳಿ ನಮ್ಮ ಚಳವಳಿಯ ಸದಸ್ಯರುಗಳ ಸೇವೆಯನ್ನು ಅಪೇಕ್ಷಿಸಿದ್ದಾರೆ. ಕೆಲವು ಜಿಲ್ಲೆಗಳಲ್ಲಿ ಈಗಾಗಲೇ ಇಂತಹ ಸೇವೆಗಳಲ್ಲಿ ನಮ್ಮ ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ತೊಡಗಿರುವುದು ಹೆಮ್ಮೆ ತಂದಿದೆ.

ಈ ಸಾಲಿನ ಬೇಸಿಗೆ ಶಿಬಿರಗಳು ರಾಜ್ಯಾದ್ಯಂತ ಎಲ್ಲ ಖಾಸಗಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳು ಮತ್ತು ಕ್ಲಸ್ಟರ್ ಹಂತಗಳಲ್ಲಿ ನಮ್ಮ ನಿರೀಕ್ಷೆಯ ಪ್ರಮಾಣದಲ್ಲಿ ನಡೆಯುತ್ತಿವೆ. ಈಗಾಗಲೇ 1 ಲಕ್ಷ ಅಂಚಿನಲ್ಲಿರುವ ಮಕ್ಕಳ ಭಾಗವಹಿಸುವಿಕೆಯ ಸಂಖ್ಯೆ ಇನ್ನೂ ಹೆಚ್ಚಾಗುವ ನಿರೀಕ್ಷೆ ಇದೆ. ಇದಕ್ಕೆ ಅಭೂತಪೂರ್ವ ಸಹಕಾರ ನೀಡುತ್ತಿರುವ ಶಿಕ್ಷಣ ಇಲಾಖೆಯ ಎಲ್ಲಾ ಹಂತದ ಅಧಿಕಾರಿಗಳಿಗೆ ನಮ್ಮ ಸಂಸ್ಥೆ ಆಭಾರಿಯಾಗಿದೆ. ಈ ಸಂಬಂಧ ನಡೆಸಲಾದ ಜೂಮ್ ಸಭೆಗಳಲ್ಲಿ ಸಕಾರಾತ್ಮಕ ಸ್ಪಂದನೆ ಸಿಗುತ್ತಿರುವುದನ್ನು ಕಂಡು ಸಂತೋಷಗೊಂಡಿದ್ದೇನೆ.

104ನೇ ರಾಜ್ಯ ಪರಿಷತ್ ಸಭೆಯ ನಂತರ ನಡೆದ ಪ್ರಪ್ರಥಮ ರಾಜ್ಯ ಕಾರ್ಯಕಾರಿ ಸಮಿತಿ ಸಭೆ ಏಪ್ರಿಲ್ 10 ರಂದು ಯಶಸ್ವಿಯಾಗಿ ಜರುಗಿದೆ. ಸಭೆಯಲ್ಲಿ ಭಾಗವಹಿಸಿದ ಸದಸ್ಯರುಗಳು ವ್ಯಕ್ತಪಡಿಸಿದ ಸಹಕಾರಕ್ಕೆ ನಾನು ಚಿರಋಣಿ.

ರಾಜ್ಯದಲ್ಲಿ ಸಕ್ರಿಯವಾಗಿರುವ ಎಲ್ಲಾ ಮುಕ್ತದಳಗಳು ಉತ್ತಮವಾಗಿ ಕೆಲಸ ಮಾಡುತ್ತಿವೆ. ರಾಜ್ಯ ಸಂಸ್ಥೆ ಮತ್ತು ಮುಕ್ತದಳಗಳ ನಡುವಿನ ಸಂಪರ್ಕವನ್ನು ಮತ್ತಷ್ಟು ಗಟ್ಟಿಗೊಳಿಸುವ ಮಹತ್ತರವಾದ ಉದ್ದೇಶದೊಂದಿಗೆ ಏಪ್ರಿಲ್ 11 ರಂದು ಮುಕ್ತದಳ ನಾಯಕರ ಜೂಮ್ ಸಭೆಯನ್ನು ಸಂಘಟಿಸಲಾಗಿತ್ತು. ಚಾಮುಂಡಿ ಮುಕ್ತದಳದ ಹಿರಿಯ ನಾಯಕರಾದ ಶ್ರೀ ನರಸಿಂಹಮೂರ್ತಿಯವರನ್ನೊಳಗೊಂಡಂತೆ, 98 ಮುಕ್ತದಳಗಳ ನಾಯಕರುಗಳು ಭಾಗವಹಿಸಿ ಉತ್ತಮ ಸಲಹೆಗಳನ್ನು ಕೊಟ್ಟಿದ್ದಾರೆ. ಮುಕ್ತವಾಗಿ ತಮ್ಮ ಭಾವನೆಗಳನ್ನು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮುಂದಿನ ದಿನಗಳಲ್ಲಿ ರಾಜ್ಯ ಸಂಸ್ಥೆ ಮುಕ್ತದಳಗಳೊಂದಿಗೆ ಸೌಹಾರ್ದಯುತ ಸಂಪರ್ಕವನ್ನು ಮುಂದುವರೆಸಿಕೊಂಡು ಹೋಗುವ ಇಚ್ಛೆ ಹೊಂದಿದ್ದೇನೆ. ಈ ನಿಟ್ಟಿನಲ್ಲಿ ರಾಜ್ಯ ಸಂಸ್ಥೆ ಕಾರ್ಯೋನ್ಮುಖವಾಗಿದೆ.

2022–23ನೇ ಸಾಲಿನ ದ್ವಿತೀಯ ಪಿ.ಯು.ಸಿ. ಫಲಿತಾಂಶ ಪ್ರಕಟವಾಗಿದ್ದು, ಇದೇ ಮೊದಲ ಬಾರಿಗೆ ಶೇ. 74.67 ರಷ್ಟು ಫಲಿತಾಂಶ ಲಭ್ಯವಾಗಿದೆ. ದಾಖಲೆ ಪ್ರಮಾಣದ ಫಲಿತಾಂಶ ಸೃಷ್ಟಿಸಿರುವ ರಾಜ್ಯದ ಎಲ್ಲ ವಿದ್ಯಾರ್ಥಿಗಳಿಗೆ ವಿಶೇಷವಾಗಿ ಗಣನೀಯ ಸಂಖ್ಯೆಯಲ್ಲಿ ತೇರ್ಗಡೆ ಹೊಂದಿರುವ ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳಿಗೆ ರಾಜ್ಯ ಸಂಸ್ಥೆಯ ಪರವಾಗಿ ಹಾಗೂ ವೈಯಕ್ತಿಕವಾಗಿ ತುಂಬುಹೃದಯದ ಅಭಿನಂದನೆಗಳು. ಸ್ಕೌಟ್ಸ್–ಗೈಡ್ಸ್‌ಗಳು ನಮ್ಮ ಸಂಸ್ಥೆಗೆ ಹೆಗ್ಗಳಿಕೆ ತಂದಿದ್ದಾರೆ. ಈ ಎಲ್ಲ ವಿದ್ಯಾರ್ಥಿಗಳ ಮುಂದಿನ ಶೈಕ್ಷಣಿಕ ಜೀವನಕ್ಕೆ ಯಶಸ್ಸನ್ನು ಹಾರೈಸುತ್ತೇನೆ.

ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಎಲ್ಲಾ ಪದವಿ ಕಾಲೇಜುಗಳ ಪಠ್ಯಕ್ರಮದಲ್ಲಿ 2ನೇ ಸೆಮಿಸ್ಟರ್‌ನಿಂದ ನಮ್ಮ ಸಂಸ್ಥೆಯ ರೋವರಿಂಗ್ ಮತ್ತು ರೇಂಜರಿಂಗ್ ವಿಷಯವನ್ನು ಮೌಲ್ಯಾಧಾರಿತ ವಿಷಯವಾಗಿ ಪರಿಚಯಿಸಿದೆ. ಇದರ ಹಿನ್ನೆಲೆಯಲ್ಲಿ ಈ ವಿಷಯವನ್ನು ಪರಿಣಾಮಕಾರಿಯಾಗಿ ಬೋಧಿಸಲು ಅನುಕೂಲವಾಗುವಂತೆ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಕಾರ್ಯಾಗಾರವನ್ನು ಏರ್ಪಡಿಸುವ ಬಗ್ಗೆ ಏಪ್ರಿಲ್ 19 ರಂದು ನಡೆದ ಪೂರ್ವ ಸಿದ್ಧತಾ ಸಭೆಯಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ವಿಶೇಷಾಧಿಕಾರಿಗಳಾದ ಡಾ॥ ಎಂ. ಜಯಪ್ಪ, ಕಾಲೇಜು ಶಿಕ್ಷಣ ಮತ್ತು ಪದವಿಪೂರ್ವ ಶಿಕ್ಷಣ ಇಲಾಖೆಯ ಸಹನಿರ್ದೇಶಕರಾದ ಶ್ರೀ ಗುಬ್ಬಿಗೂಡು ರಮೇಶ್, ನೋಡಲ್ ಅಧಿಕಾರಿಗಳಾದ ಶ್ರೀ ಶ್ರೀಕಾಂತ್ ಹಾಗೂ ನಮ್ಮ ರಾಜ್ಯ ಸಂಸ್ಥೆಯ ಕೆಲವು ಪದಾಧಿಕಾರಿಗಳು, ಅಧಿಕಾರಿಗಳು ಭಾಗವಹಿಸಿದ್ದರು. ಫಲಪ್ರದವಾದ ಚರ್ಚೆ ನಡೆಯಿತು. ಸಭೆಯಲ್ಲಿ ಕೈಗೊಂಡ ತೀರ್ಮಾನಗಳಂತೆ, ಈ ಬಗ್ಗೆ ರೂಪುರೇಷೆಗಳನ್ನು ಸಿದ್ಧಪಡಿಸುವುದಕ್ಕಾಗಿ ಶಿಕ್ಷಣ ಕ್ಷೇತ್ರದಲ್ಲಿ ಜ್ಞಾನ ಹೊಂದಿದ್ದು, ನಮ್ಮ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಕೆಲವು ಪದಾಧಿಕಾರಿಗಳನ್ನೊಳಗೊಂಡ ಸಮಿತಿ ರಚಿಸಲಾಗಿದೆ. ಆ ಸಮಿತಿ ಬಗ್ಗೆ ಕಾರ್ಯವನ್ನು ಪ್ರಾರಂಭಿಸಿದೆ.

ದೊಡ್ಡಬಳ್ಳಾಪುರದ ನಮ್ಮ ತರಬೇತಿ ಕೇಂದ್ರದಲ್ಲಿ ಏಪ್ರಿಲ್ 16 ರಿಂದ 20ರ ವರೆಗೆ ಬೆಂಗಳೂರು ದಕ್ಷಿಣ ಜಿಲ್ಲಾ ಸಂಸ್ಥೆಯಿಂದ ತೃತೀಯ ಸೋಪಾನ ಪರೀಕ್ಷಾ ಶಿಬಿರ ಮತ್ತು ರಾಜ್ಯ ಪುರಸ್ಕಾರ ಪೂರ್ವ ಸಿದ್ಧತಾ ಶಿಬಿರವನ್ನು ಅತ್ಯುತ್ತಮವಾಗಿ ಸಂಘಟಿಸಲಾಗಿತ್ತು. ಏಪ್ರಿಲ್ 19 ರಂದು ನಡೆದ ಭವ್ಯ ಶಿಬಿರಾಗ್ನಿಯಲ್ಲಿ ನಾನು ಭಾಗವಹಿಸಿ ಶುಭಕೋರಿದ್ದೇನೆ.

ಏಪ್ರಿಲ್ 23 ರಂದು ಜ್ಞಾನದ ಬೆಳಕು ಚೆಲ್ಲಿದ ವಿಶ್ವಗುರು ಬಸವಣ್ಣನವರ ಜಯಂತಿ. 12ನೇ ಶತಮಾನದಲ್ಲಿ ತನ್ನ ವಚನಗಳ ಮೂಲಕವೇ ಜ್ಞಾನದೀವಿಗೆ ಹಚ್ಚಿದ ಕರುನಾಡು ಕಂಡ ಈ ಮಹಾನ್ ಸಮಾಜ ಸುಧಾರಕನಿಗೆ ಜಗತ್ತಿನೆಲ್ಲೆಡೆ ಜನ ನಮನ ಸಲ್ಲಿಸಿದ್ದಾರೆ. ಅವರ ಒಂದೊಂದು ವಚನವೂ ಸ್ವಸ್ಥ ಸಮಾಜ ನಿರ್ಮಾಣಕ್ಕೆ ದಾರಿದೀಪ ಅಷ್ಟೇ ಅಲ್ಲದೆ ಈಗಿನ ಸನ್ನಿವೇಶದಲ್ಲಿ ಅವುಗಳು ಹೆಚ್ಚು ಪ್ರಸ್ತುತ ಎನಿಸಿವೆ. ಎಲ್ಲರಿಗೂ ಬಸವ ಜಯಂತಿಯ ಹಾರ್ದಿಕ ಶುಭಾಶಯಗಳು.

ಸ್ಕೌಟ್ ಮತ್ತು ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು



# ಚಿಂತೆ ಚಿಂತನ


ನಾಡೋಜ ಡಾ. ಗೊ.ರು. ಚನ್ನಬಸಪ್ಪ
ಗೌರವಾಧ್ಯಕ್ಷರು, ಪ್ರಕಟಣೆಗಳ ಸಮಿತಿ
ಭಾರತ್ ಸ್ಕೌಟ್ಸ್-ಗೈಡ್ಸ್, ಕರ್ನಾಟಕ


ಅರ್ಥ ಮತ್ತು ಪರಿಣಾಮ ಎರಡು ದೃಷ್ಟಿಯಿಂದಲೂ ವಿಭಿನ್ನವಾದ ಅನುಭವಗಳು ಚಿಂತೆ ಮತ್ತು ಚಿಂತನ. ಚಿಂತೆಗೆ ಮೂಲ-ವ್ಯಕ್ತಿಯ ಸ್ವಾರ್ಥ, ದೌರ್ಬಲ್ಯ, ಹತಾಶತೆ, ಅಸಹನೆ, ಉದ್ವೇಗ, ದ್ವೇಷ ಮತ್ತು ಆಸೆ-ನಿರಾಸೆಗಳು. ಚಿಂತನದ ಮೂಲ-ವ್ಯಕ್ತಿಯ ಅಂತರಂಗ ಬಹಿರಂಗ ಶುದ್ಧಿಯ ಹಂಬಲ, ಸಮಸ್ಯಾ ಮೂಲ ಮತ್ತು ಪರಿಹಾರಗಳ ಹುಡುಕಾಟ, ಜೀವನ ಮೌಲ್ಯಗಳ ಅನ್ವಯೇಚ್ಛೆ, ದುಃಖನಿವಾರಣೆಯ ಸಂಕಲ್ಪ, .ಚಿಂತೆಯ ಸ್ವರೂಪ ದುಃಖ, ಸ್ವಭಾವ ದುಗುಡ, ಪರಿಣಾಮ ಪತನ. ಚಿಂತನೆಯ ಸ್ವರೂಪ ಸುಖ, ಸ್ವಭಾವ ಪ್ರಸನ್ನ, ಪರಿಣಾಮ ಉತ್ಥಾನ.

ಚಿಂತೆ ಬದುಕನ್ನು ಮರುಗಿಸುತ್ತದೆ: ಚಿಂತನ ಅರಳಿಸುತ್ತದೆ. ಒಂದು ಮನಸ್ಸನ್ನು ಚಂಚಲಗೊಳಿಸಿದರೆ, ಇನ್ನೊಂದು ಚೇತನಗೊಳಿಸುತ್ತದೆ. ಇಷ್ಟಾದರೂ ಒಮ್ಮೊಮ್ಮೆ ಚಿಂತನಕ್ಕೆ ಚಿಂತೆಯೇ ಪ್ರೇರಣೆಯಾಗಬಹುದು. ಆದರೆ ಚಿಂತನ ಮಾತ್ರ ಚಿಂತೆಗೆ ಕಾರಣವಾಗುವುದಿಲ್ಲ. ಬದುಕು ಜಡವಾದಾಗ ಚಿಂತನೆ ಚೇತನ ತಂದುಕೊಡುತ್ತದೆ. ಒಮ್ಮೊಮ್ಮೆ ಚಿಂತನೆಯ ಕ್ರಿಯೆಯೇ ಜಡವಾದಾಗ ಚಿಂತೆ ಅದಕ್ಕೆ ಚಾಲನೆ ಒದಗಿಸುವುದೂ ಉಂಟು. ಭಾವಜೀವಿಯಾದ ಮಾನವನನ್ನು ಚಿಂತೆ ಆವರಿಸದಂತೆಯೇ ಮಾಡುವುದು ಕಷ್ಟ. ಆದರೆ ಅದನ್ನು ಸಾಧ್ಯವಾದಷ್ಟು ಮಟ್ಟಿಗೆ ನಿರೋಧಿಸಲು, ನಿಯಂತ್ರಿಸಲು ಚಿಂತನೆ ನೆರವಾಗುವುದಂತೂ ನಿಜ.

ಚಿಂತನವೆಂದರೆ ವಿಚಾರ ಮಂಥನ. ಒಳಿತು ಕೆಡುಕುಗಳ ವಿವೇಚನೆ. ತಿಳಿದುಕೊಂಡ, ತಿಳಿದುಕೊಳ್ಳಬೇಕಾದ ವಿಷಯಗಳ ವಿಮರ್ಶೆ; ಸಮಸ್ಯಾ ಮೂಲಗಳ ಶೋಧನೆ; ಪರಿಹಾರ ಮಾರ್ಗಗಳ ಅನ್ವೇಷಣೆ. ಚಿಂತನಕ್ಕೆ ಹಿನ್ನಲೆ ಅನುಭವ ಜ್ಞಾನ; ಗ್ರಂಥಾಧ್ಯಯನ. ಅದು ವ್ಯಷ್ಟಿ ಸಮಷ್ಟಿಗಳ ಅನುಭವ ವಿನಿಮಯವೂ ಹೌದು, ಹಂಚಿಕೆಯೂ ಹೌದು. ಒಟ್ಟಾರೆ ಚಿಂತನವೆನ್ನುವುದು ಜೀವನವನ್ನು ಚಿಂತೆಯಿಂದ ಬಿಡುಗಡೆ ಮಾಡುವ ಒಂದು ಮಾರ್ಗ. ಅದು ಒಂದು ರೀತಿಯಲ್ಲಿ ಅಂತರಂಗ ಸಂಸ್ಕೃತಿ.

ಬದುಕಿನ ಗೊಂದಲದಿಂದ ಕೆಲವು ಸಲ ಉಂಟಾಗುವ ಚಿಂತೆಯಿಂದ ಬಿಡುಗಡೆ ಹೊಂದಲು ಮಾನವ ಯಾವಾಗಲೂ ಚಿಂತನ ನಡೆಸುತ್ತಲೇ ಬಂದಿದ್ದಾನೆ. ಬದುಕಿರುವವರೆಗೂ ಈ ಚಿಂತೆ-ಚಿಂತನೆಗಳ ದುಃಖ-ಸುಖಗಳನ್ನು ಅನುಭವಿಸುತ್ತಲೇ ಬಂದಿದ್ದಾನೆ. ಅವನ ಅನುಭವದಲ್ಲಿ ಚಿಂತೆ ಸೋತ ಕಡೆ ಚಿಂತನ ಗೆದ್ದಿರುವುದನ್ನು ಕಂಡುಕೊಂಡಿದ್ದಾನೆ.

ವ್ಯಕ್ತಿ ಬಹುತೇಕ ಚಿಂತೆಗೆ ಒಳಗಾಗುವುದು ತನ್ನ ಮಾನಸಿಕ ದೌರ್ಬಲ್ಯದಿಂದ. ಈ ದೌರ್ಬಲ್ಯ ನಿವಾರಣೆ ಚಿಂತನದಿಂದ ಸಾಧ್ಯವಿದೆ. ಬದುಕಿನಲ್ಲಿ ನಮಗೆ ನೆಮ್ಮದಿ ಬೇಕೆಂದರೆ ಮೊದಲು ಚಿಂತೆಗೆ ಅವಕಾಶವಾಗದಂತೆ ನೋಡಿಕೊಳ್ಳುವ, ಚಿಂತೆ ಬಂದಾಗ ಅದರಿಂದ ಬಿಡುಗಡೆ ಹೊಂದುವ ಹಂಬಲವಿರಬೇಕು.

ಜೀವನ ಸಂಸಾರದ ತೆಪ್ಪಕ್ಕೆ ಅಂಟಿಕೊಂಡದ್ದರೆ ಚಿಂತೆಯಿಂದ ಪಾರಾಗುವುದು ಕಷ್ಟ. ಪ್ರವಾಹದ ಭರದಲ್ಲಿ ಆ ತೆಪ್ಪ ಯಾವುದಾದರೂ ಬಂಡಿಗೆಡಿಕ್ಕಿ ಹೊಡೆಯಬಹುದು ಅಥವಾ ಅದರೊಳಗೆ ನೀರು ಸೇರಿ ಎಲ್ಲಾದರೂ ಮುಳುಗಿ ಬಿಡಬಹುದು. ಅಂತಹ ಸಂದರ್ಭದಲ್ಲಿ ಅದಕ್ಕೆ ಅಂಟಿಕೊಂಡಿದ್ದ ಜೀವಕ್ಕೆ ಆ ತೆಪ್ಪದಗತಿಯೇ ಒದಗುತ್ತದೆ. ಅಂಟಿಲ್ಲದಿದ್ದರೆ ಹೊರಗೆ ಹಾರಿ ಈಜಿ ದಡ ಸೇರಬಹುದು. ಇದಕ್ಕೆ ಸಮಯ ಪ್ರಜ್ಞೆ ಬೇಕಾಗುತ್ತದೆ. ಇಲ್ಲಿ ತೆಪ್ಪದಿಂದ ಹೊರಗೆ ಹಾರುವುದೆಂದರೆ ಬದುಕಿನಿಂದ ವಿಮುಖವಾಗುವುದು ಎಂದು ಅರ್ಥವಲ್ಲ. ಆಕಸ್ಮಿಕದಿಂದ ಪಾರಾಗುವುದು ಎಂದರ್ಥ; ಬದುಕಿನ ತೊಡಕುಗಳಿಂದ ಬಿಡಿಸಿಕೊಳ್ಳುವುದು ಎಂದರ್ಥ.

ಚಿಂತನಶೀಲನಾದವನು ಸಾಮಾನ್ಯವಾಗಿ ತನ್ನ ಬದುಕಿನಲ್ಲಿ ತೊಡಕು ತಲೆದೋರದಂತೆ ನೋಡಿಕೊಳ್ಳುತ್ತಾನೆ. ಅಷ್ಟೇ ಅಲ್ಲ; ಆಕಸ್ಮಿಕವಾಗಿ ಎರಗಿ ಬರುವ ತೊಡರುಗಳನ್ನು ನಿವಾರಿಸಿಕೊಳ್ಳುವ ಸಾಮರ್ಥ್ಯವನ್ನು ಪಡೆದಿರುತ್ತಾನೆ. ಚಿಂತನೆಯ ಒಂದು ಪ್ರಭಾವಪೂರ್ಣ ಪರಿಣಾಮ ಅಥವಾ ಫಲವೆಂದರೆ ಮನೋಸ್ಥೈರ್ಯ. ಸುಖ-ದುಃಖಗಳನ್ನು ಸಮದೃಷ್ಟಿಯಿಂದ ಕಾಣುವ ಮಾಗಿದ ಮನಸ್ಸು. ಚಿಂತನೆಯ ಎತ್ತರಕ್ಕೆ ಹತ್ತಿದಂತೆಲ್ಲ ಚಿಂತೆಯ ಕಣಿವೆ-ಕೊರಕಲುಗಳು ದೂರವಾಗುತ್ತವೆ.

ಬದುಕನ್ನು ಒಂದು ಕಲೆ ಎನ್ನುತ್ತಾರೆ. 'ಇದ್ದರೂ ಇಲ್ಲದಂತಿರಬೇಕು' ಎನ್ನುವುದು ಅನುಭಾವಿಗಳ ಮಾತು. ಭಾರವಿಳಿಸಿಕೊಂಡರೆ ಬದುಕು ಹಗುರವಾಗುತ್ತದೆ. ನಿಶ್ಚಿಂತೆ ತಾನಾಗಿಯೇ ನೆಲೆಗೊಳ್ಳುತ್ತದೆ. ಈ ಭಾರವಿಳಿಸಿಕೊಳ್ಳುವುದೇ ಚಿಂತನೆಯ ಆಶಯ; ಎಂದರೆ ಭಾರ ಹೇರುವುದು ಚಿಂತೆ; ಭಾರ ಇಳಿಸುವುದು ಚಿಂತನೆ!

# ವಿಶ್ವ ಮಹಿಳಾ ದಿನಾಚರಣೆ-2023



ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ ಮಾರ್ಚ್ 28 ರಂದು ಉಚಿತ ಕ್ಯಾನ್ಸರ್ ಜಾಗೃತಿ ಮತ್ತು ತಪಾಸಣಾ ಶಿಬಿರವನ್ನು ಇನ್ನರ್ ವ್ಹೀಲ್ ಕ್ಲಬ್ ಆಫ್ ಬೆಂಗಳೂರು ಬ್ಲಾಸಮ್ಸ್ ಡಿಸ್ಟ್ರಿಕ್ಟ್ 319 ಹಾಗೂ ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಬೆಂಗಳೂರು ಅವರುಗಳ ಸಹಯೋಗದೊಂದಿಗೆ ರಾಜ್ಯ ಕೇಂದ್ರ ಕಛೇರಿಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು(ಗೈ) ವಹಿಸಿದ್ದರು. ಶ್ರೀಮತಿ ಬಿ.ವಿ. ರಾಮಲತಾ, ರಾಜ್ಯ ಜಂಟಿ ಕಾರ್ಯದರ್ಶಿ(ಗೈ) ಅವರ ಸ್ವಾಗತ ನುಡಿಗಳ ನಂತರ, ಶ್ರೀಮತಿ ಮುಕ್ತಾ ಕಾಗಲೆ, ಕೇಂದ್ರ ಸ್ಥಾನಿಕ ಆಯುಕ್ತರು(ಗೈ) ಅವರು ಮಹಿಳಾ ದಿನಾಚರಣೆ ಬಗ್ಗೆ ಪ್ರಾಸ್ತಾವಿಕ ನುಡಿಗಳನ್ನು ಪ್ರಸ್ತುತ ಪಡಿಸಿದರು. ಶ್ರೀಮತಿ ಆಶಾ ಪ್ರಸನ್ನಕುಮಾರ್, ಉಪಾಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಮತ್ತು ತುಮಕೂರು ಜಿಲ್ಲಾ ಮುಖ್ಯ ಆಯುಕ್ತರು ಇವರು ದೀಪ ಬೆಳಗುವುದರ ಮೂಲಕ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್.ಸಿಂಧ್ಯ ಹಾಗೂ ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬಿ. ಷಣ್ಮುಖಪ್ಪ ರವರು ರಾಜ್ಯ ಕೇಂದ್ರ ಕಛೇರಿಯಲ್ಲಿ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರವನ್ನು ನಡೆಸುತ್ತಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಇನ್ನರ್ ವ್ಹೀಲ್ ಕ್ಲಬ್ ಆಫ್ ಬೆಂಗಳೂರು ಬ್ಲಾಸಮ್ಸ್ ಡಿಸ್ಟ್ರಿಕ್ಟ್ 319 ಹಾಗೂ ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಬೆಂಗಳೂರು ಇವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ಶ್ರೀಮತಿ ವಿನುತ ಹರೀಶ್, ಛೇರ್‌ಮನ್, ಇನ್ನರ್‌ವ್ಹೀಲ್ ಕ್ಲಬ್ ರವರು ಮಾತನಾಡುತ್ತಾ ಈ ಅವಕಾಶವನ್ನು ಹಾಜರಿರುವ ಮಹಿಳೆಯರು ಸದುಪಯೋಗ ಪಡಿಸಿಕೊಳ್ಳಲೆಂಬ ಆಶಯ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ದೆಹಲಿಗೆ ವರ್ಗಾವಣೆ ಆಗಿರುವ ಪ್ರಾದೇಶಿಕ ಕಛೇರಿಯ ಸಹಾಯಕ ನಿರ್ದೇಶಕರಾದ ಶ್ರೀಮತಿ ಕುಮುದ್ ಮೆಹರಾ ರವರನ್ನು ಸನ್ಮಾನಿಸಲಾಯಿತು.

ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ತಪಾಸಣಾ ವಿಭಾಗದ ಮುಖ್ಯಸ್ಥರಾದ ಡಾ|| ಗುರುಸುಹಾಸ್ ರವರು ತಮ್ಮ ಭಾಷಣದಲ್ಲಿ ಕ್ಯಾನ್ಸರ್ ಜಾಗೃತಿಯ ಬಗ್ಗೆ ಉತ್ತಮ ವಿಷಯಗಳನ್ನು ತಿಳಿಸಿದರು. ಈ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳುವಲ್ಲಿ ಹೆಚ್ಚಿನ ಶ್ರಮವಹಿಸಿದ ರಾಜ್ಯ ಗೈಡ್ಸ್ ಆಯುಕ್ತರಾದ ಶ್ರೀಮತಿ ಗೀತಾನಟರಾಜ್ ರವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಕ್ಯಾನ್ಸರ್ ಬಗ್ಗೆ ಮಹಿಳೆಯರಿಗೆ ಅರಿವು ಮೂಡಿಸುವುದೇ ಈ ಶಿಬಿರದ ಉದ್ದೇಶವೆಂದು ತಿಳಿಸಿದರು. ಗೈಡ್ ವಿಭಾಗದ ಸಹಾಯಕ ರಾಜ್ಯ ಆಯುಕ್ತರಾದ ಶ್ರೀಮತಿ ರಾಧಾ ವೆಂಕಟೇಶ್ ರವರ ವಂದನಾರ್ಪಣೆಯೊಂದಿಗೆ ಉದ್ಘಾಟನಾ ಸಮಾರಂಭ ಮುಕ್ತಾಯವಾಯಿತು.

ಕ್ಯಾನ್ಸರ್ ತಪಾಸಣೆಗೆ 72 ಜನ ಹಾಜರಿದ್ದರು. ಡಾ|| ಗುರುಸುಹಾಸ್, ಡಾ|| ರಂಗನಾಯಕಿ ಮತ್ತು ಡಾ|| ಜವೇರಿಯಾ ರವರ ನೇತೃತ್ವದಲ್ಲಿ ಸ್ತನ, ಗರ್ಭಕೋಶ, ಬಾಯಿಯ ಕ್ಯಾನ್ಸರ್ ಹಾಗೂ ಸಾಮಾನ್ಯ ಆರೋಗ್ಯ ಪರೀಕ್ಷೆಗಳಾದ ರಕ್ತದ ಒತ್ತಡ ಮತ್ತು ಮಧುಮೇಹ ಇವುಗಳ ತಪಾಸಣೆಗಳು

ಉತ್ತಮವಾಗಿ ನಡೆಯಿತು. ತಾಂತ್ರಿಕ ತಂಡದ ಶ್ರೀ ವಿಜಯಕುಮಾರ್ ಮತ್ತು ಶ್ರೀ ಯುವರಾಜ್, ಸಿಸ್ಟರ್‌ಗಳಾದ ಕೀರ್ತಿ, ಶಿಲ್ಪ, ಜೆಬ ಅನುಷ್ಯ, ಜ್ಯೋತಿ ಮತ್ತು ಸೌಮ್ಯ ಸಹಕರಿಸಿದರು.

ಶ್ರೀಮತಿ ರೇಖಾ ನಿರಂಜನ್, ಅಧ್ಯಕ್ಷರು, ಇನ್ನರ್ ವ್ಹೀಲ್ ಕ್ಲಬ್ ಆಫ್ ಬೆಂಗಳೂರು ಬ್ಲಾಸಮ್ ಡಿಸ್ಟ್ರಿಕ್ಟ್ 319 ರವರು ಈ ಶಿಬಿರವನ್ನು ನಡೆಸಲು ಸಹಕಾರವನ್ನು ನೀಡಿದರು. ಶ್ರೀಮತಿ ಸಿ. ಮಂಜುಳ, ರಾಜ್ಯ ಸಂಘಟನಾ ಆಯುಕ್ತರು (ಗೈ) ರವರು ಕಾರ್ಯಕ್ರಮವನ್ನು ನಿರೂಪಿಸಿದರು. ರಾಜ್ಯ ಕಾರ್ಯಾಲಯದ ಎಲ್ಲಾ ಸಿಬ್ಬಂದಿ ವರ್ಗದವರು ಈ ತಪಾಸಣಾ ಶಿಬಿರವು ಯಶಸ್ವಿಯಾಗಿ ನಡೆಸಲು ಸಹಕರಿಸಿದರು.







## ರಾಷ್ಟ್ರೀಯ ಶಿಕ್ಷಣ ನೀತಿ (2020)ಯ ಸಭೆ (ಎನ್‌ಇಪಿ)

ಶ್ರೀ ಪಿ.ಜಿ.ಆರ್.ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರವರ ಅಧ್ಯಕ್ಷತೆಯಲ್ಲಿ ಏಪ್ರಿಲ್ 19ರಂದು ರಾಜ್ಯ ಕೇಂದ್ರ ಕಛೇರಿಯಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (2020)ರನ್ವಯ ರೋವರಿಂಗ್–ರೇಂಜರಿಂಗ್ ಪಠ್ಯವನ್ನು ಮೌಲ್ಯಾಧಾರಿತವಾಗಿ ಬೋಧಿಸುವ ಸಲುವಾಗಿ ಸಭೆ ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಪ್ರತಿ ವಿಶ್ವವಿದ್ಯಾಲಯಗಳ ಹಂತದಲ್ಲಿ ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್ಸ್‌ಗಳಿಗೆ ಮೇ 17 ರಿಂದ 31ರೊಳಗೆ ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಲು ಹಾಗೂ ಏಕರೂಪ ಬೋಧನಾ ಪಠ್ಯಕ್ರಮವನ್ನು ಪಿ.ಪಿ.ಟಿ.ಯಲ್ಲಿ ಸಿದ್ಧಪಡಿಸಿ ಮಾಹಿತಿ ನೀಡಲು ಚರ್ಚಿಸಲಾಯಿತು. ಸರ್ಕಾರಿ ಕಾಲೇಜುಗಳೊಂದಿಗೆ ಅನುದಾನಿತ ಮತ್ತು ಅನುದಾನರಹಿತ ಕಾಲೇಜುಗಳಿಗೆ ಹೆಚ್ಚು ಪ್ರಾಧಾನ್ಯತೆ ನೀಡಿ, ಸದರಿ ಕಾಲೇಜುಗಳಲ್ಲಿನ ಪ್ರಾಧ್ಯಾಪಕರುಗಳನ್ನು ರೋವರಿಂಗ್–ರೇಂಜರಿಂಗ್ ತರಬೇತಿಗಳಿಗೆ ನಿಯೋಜಿಸುವ ಮೂಲಕ ಕಾಲೇಜುಗಳಲ್ಲಿ ರೋವರ್–ರೇಂಜರ್ ಘಟಕಗಳನ್ನು ಕಡ್ಡಾಯವಾಗಿ ತೆರೆಯಲು ಹಾಗೂ ಕಾಲೇಜು ಶಿಕ್ಷಣ ಇಲಾಖೆಯಿಂದ ಉಪನ್ಯಾಸಕರುಗಳಿಗೆ ಒಂದು ದಿನದ ಕಾರ್ಯಾಗಾರ ಆಯೋಜಿಸಲು ಇಲಾಖಾಧಿಕಾರಿಗಳ ಸಹಕಾರ ಕೋರಲು ತೀರ್ಮಾನಿಸಲಾಯಿತು.

ಸದರಿ ಸಭೆಯಲ್ಲಿ ಡಾ॥ ಜಯಪ್ಪ, ವಿಶೇಷಾಧಿಕಾರಿಗಳು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಡಾ॥ ಶ್ರೀಕಾಂತ್, ನೋಡೆಲ್ ಅಧಿಕಾರಿಗಳು, ಕಾಲೇಜು ಶಿಕ್ಷಣ ಇಲಾಖೆ, ಶ್ರೀ ಗುಬ್ಬಿಗೂಡು ರಮೇಶ್, ಸಹಾಯಕ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು, .ಶ್ರೀ ಎಲ್.ಟಿ. ಲೋಕೇಶ್, ಸಹಾಯಕ ಕಾರ್ಯದರ್ಶಿ ಹಾಗೂ ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್ಸ್ ಮತ್ತು ಗೈಡ್ಸ್, ) ರಾಜ್ಯ ತರಬೇತಿ ಆಯುಕ್ತರು (ಸ್ಕೌಟ್ಸ್ ಮತ್ತು ಗೈಡ್ಸ್), ಎಎಸ್‌ಒಸಿ(ಗೈ) ಮತ್ತು ರೇಂಜರಿಂಗ್, ಇನ್‌ಚಾರ್ಜ್ ಮತ್ತು ಎಎಸ್‌ಒಸಿ(ಗೈ) ಹಾಗು ಎಕ್ಸಾಮಿನೇಷನ್ ಇನ್‌ಚಾರ್ಜ್ ಇವರುಗಳು ಉಪಸ್ಥಿತರಿದ್ದರು.





## ಶಾಲಾ ಹಂತ ಅಥವಾ ಕ್ಲಸ್ಟರ್ ಹಂತಗಳಲ್ಲಿ ಸ್ಕೌಟ್ಸ್-ಗೈಡ್ಸ್‌ಗಳಿಗೆ ಬೇಸಿಗೆ ಶಿಬಿರಗಳನ್ನು ಆಯೋಜಿಸಲು ಸಾರ್ವಜನಿಕ ಶಿಕ್ಷಣ ಇಲಾಖೆಯ ಅನುಮತಿಯ ಆದೇಶದ ಪ್ರತಿ

ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ: ದೈ.ಶಿ/ಭಾ.ಸ್ಕೌ.ಗೈ/ಬೇಸಿಗೆ.ಶಿಬಿರ/2022-23 ದಿನಾಂಕ: 31.03.2023

**:ಸುತ್ತೋಲೆ:**

ವಿಷಯ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯಿಂದ ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರಗಳನ್ನು ಆಯೋಜಿಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ ಇಪಿ 23 ಎಂಪಿಇ 2023 ದಿನಾಂಕ: 18.03.2022.

************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಸರ್ಕಾರದ ಪತ್ರದಲ್ಲಿ 2023 ರ ಏಪ್ರಿಲ್ ಮತ್ತು ಮೇ ತಿಂಗಳ ಬೇಸಿಗೆ ರಜೆಯ ಸಮಯದಲ್ಲಿ ಆಯಾಯ ಶಾಲಾ ಹಂತ ಅಥವಾ ಕ್ಲಸ್ಟರ್ ಹಂತದಲ್ಲಿ 03 ರಿಂದ 7 ದಿನಗಳ ಅವಧಿಯಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಿ ಸ್ಕೌಟಿಂಗ್-ಗೈಡಿಂಗ್ ಕೌಶಲ್ಯಗಳಾದ ಪ್ರಥಮ ಚಿಕಿತ್ಸೆ ಪಯನರಿಂಗ್, ಮ್ಯಾಪಿಂಗ್, ಎಸ್ಟಿಮೇಷನ್, ಶಿಬಿರಾಗ್ನಿ, ಸರ್ವಧರ್ಮ ಪ್ರಾರ್ಥನೆ ಇತ್ಯಾದಿ ತರಬೇತಿಗಳನ್ನು ನೀಡಲು ಉದ್ದೇಶಿಸಲಾಗಿದ್ದು 2023 ರ ಏಪ್ರಿಲ್ ಮತ್ತು ಮೇ ತಿಂಗಳ ಬೇಸಿಗೆ ರಜೆಯ ಸಮಯದಲ್ಲಿ ಆಯಾಯ ಶಾಲಾ ಹಂತ ಅಥವಾ ಕ್ಲಸ್ಟರ್ ಹಂತದಲ್ಲಿ 03 ರಿಂದ 07 ದಿನಗಳ ಅವಧಿಯಲ್ಲಿ ಬೇಸಿಗೆ ಶಿಬಿರ ಆಯೋಜಿಸಲು ಅನುಮತಿಯನ್ನು ನೀಡಿರುತ್ತಾರೆ.

ಮುಂದುವರೆದು ಸಾರ್ವಜನಿಕ ಶಿಕ್ಷಣ ಇಲಾಖೆಯ ವತಿಯಿಂದ ಸದರಿ ಬೇಸಿಗೆ ಶಿಬಿರಕ್ಕೆ ಸಹಕಾರ ಮತ್ತು ಪ್ರೋತ್ಸಾಹ ನೀಡಲು ರಾಜ್ಯದ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಈ ಮೂಲಕ ತಿಳಿಸುತ್ತಾ, ಬೇಸಿಗೆ ಶಿಬಿರವನ್ನು ನಡೆಸಲು ಅನುಮತಿ ನೀಡಿದೆ.

**"ಮಾನ್ಯ ಆಯುಕ್ತರ ಆದೇಶದ ಮೇರೆಗೆ"**

ನಿರ್ದೇಶಕರು (ಮೈನಾರಿಟಿ)
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ,

1. ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ, ನಂ 39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು-01.
2. ರಾಜ್ಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ.
3. ರಾಜ್ಯ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ.
4. ಕಛೇರಿ ಪ್ರತಿ.

# 2022-23ನೇ ಸಾಲಿನ ದ್ವಿತೀಯ ಪಿ.ಯು.ಸಿಯಲ್ಲಿ ಸಾಧನೆ ಮಾಡಿದ ಸ್ಕೌಟ್-ಗೈಡ್‌ಗಳು



**ANANYA K A**
600/600 (Commerce)
Alwas PU College, Mudubidre
Dakshina Kannada



**KUSHI**
596/600 (Commerce)
Excellent PU College, Mudubidire,
Dakshina Kannada



**Chaitanya Ganapathi Hegde**
589/600 (Arts)
Alwas PU College
Mudubidire, Dakshina Kannada



**DIVYA**
582/600 (Commerce)
SS PU College, Subramanya
Dakshina Kannada



**RAKSHITHA R. SHETTY**
582/600 (Commerce)
Sri Narayanaguru PU College, Kattipalla
Mangaluru, Kakshina Kannda



**Trisha**
581/600 (Commerce)
Sri Narayanaguru PU College, Kattipalla
Mangaluru, Kakshina Kannda



**SACHIN**
579/600 (Arts)
Govindadasa PU College, Suratkal
Mangaluru, Dakshina Kannada



**Pavanya**
573/600 (Commerce)
Vani PU College
Belthangady, Dakshina Kannada



**BHOOMIKA C**
572/600 (Commerce)
SS PU College, Subramanya
Dakshina Kannada



**PAVITHRA B**
561/600 (Commerce)
Mundaje PU College, Mundaje
Belthangady, Dakshina Kannda



**SUMEDHA BHAT**
556/600 (Arts)
SDM College, Ujire, Belthangady
Dakshina Kannada



**MURALI MOHAN**
556/600 (Science)
SSA Independent Science PU College
Yadagiri District



**SANJANA G. RAO**
555/600
St. Philomina PU College
Puttur, Dakshina Kannada



**SHREELAKSHMI B K**
553/600 (Arts)
SS PU College, Subramanya
Dakshina Kannada



**KANNIKA S**
552/600 (Arts)
Vani PU College
Belthangady, Dakshina Kannada



**SAHANA SHETTY**
543/600 (Science)
SDM College, Ujire, Belthangady
Dakshina Kannada

ಇವರುಗಳಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆಯಿಂದ ತುಂಬು ಹೃದಯದ ಅಭಿನಂದನೆಗಳು

– ರಾಜ್ಯ ಕಾರ್ಯದರ್ಶಿ

# SUMMER CAMPS

## Organised by - Bharath Scouts and Guides Karnataka

## PROS & CONS

**K.Gangappa Gowda**
State Secretary
Bharat Scouts and Guides, Karnataka

### Introduction :

Summer Camp is a programme designed to provide children and youth with an opportunity to participate in various outdoor and indoor activities during the summer months. The Summer Camps usually involve a combination of activities such as Sports, Arts and Craft, Team building exercise, leadership developing Programmes and also out-door adventures such as hiking, camping and nature exploration activities and programmes. The Bharat Scouts and Guides Movement is giving a strong emphasis on teamwork, community services, development of knowledge skill and attitude of the young people on the basis of 4 pillars namely Character, Health, Arts & Craft and Quality Service. And also offer a range of activities and opportunities for personal growth and development of them.

In furtherance of encouraging Scout and Guide Movement activities and to make best use of Summer-vacation by our Scouts and Guides and also other Students with the encouragement of our beloved State Chief Commissioner Sri P.G.R.Sindhiaji, Summer Camps, at large Scale are conducted during March to May 2022 and also during March to May 2023. More than one lakh Youngsters were participated and benefitted in each periods summer camps

### Advantages of Summer Camps :

Following are some of the important advantage of Summer Camps conducted by Scout and Guide Association.

1) Development of the Skills : The Summer Camps organised by Bharat Scouts and Guides helped children to develop important Life Skills such as Leadership, Communication, Teamwork and Problem solving etc.,

2) Learning new skills :- Summer Camps offered a range of activities from sports to arts and craft which helped participants learn new skills and explore their interests.

3) Exposure to new experience: Children got new experiences that might had not had. The opportunity to try otherwise. This experiences are got by the participating in activities such as hiking, rock climbing, camping and more other such activities.

4) Building Self confidence : Participating in challenging activities and being successful in them helps to build self-confidence and self-esteem in the children.

5) Learning about Nature and the environment : The Summer being organised by focussing on environmental education and teaching children about the importance of preserving and protecting nature. As many of the summer camps are held in natural settings, such as forests, mountains, river sides, they helped the participants to develop an appreciation for nature and the environment.

6) Enhancing Physical fitness : The activities at the summer camps are aften physically challenging. When they participate in such activities there will be development of physical fitness and at active life style among the participants.

7) Making new friends : Summer Camps are more useful ways for children to meet new people and make new friends from different backgrounds.

8) Developing teamwork and leadership skills:- During Summer Camps participants learn to work together towards a common goal and take leadership roles in various activities conducted, which will help them to develop important Skills that will benefit them throughout their lives.

9) Cultivating a sense of community :-The Summer Camps conducted helped to create a sense of community among the participants, encouraging them to work together and support each other.

10) Developing important skills and values of Bharath Scouts and Guides: - During the Summer Camp steps are also taken to encourage Scout and Guide skills and values in addition to carrying other activities of Summer Camp. It helped the students to know more about Scout and Guide Movement and encouraged other new students to join Scout and Guide Movement.

## Conclusion :

The conduct of Summer Camps by Bharath Scouts and Guides Association is a valuable experience for the participants. It helped them to develop important Skills and values. It was rewarding and enriching experience for the children. They got new experiences and got ever lasting memories. The supports given by all the Scout and Guide Leaders, Associations, unit Leaders, Department of Public Instruction. Authorities and Public at large is highly appreciable and encouraging. We are all grateful to them. By knowing the above positive impacts in furtherance of implementing quality education among Youth, more steps to be taken to implement more and more summer camps in its right spirit in future summer vacations also.

With Best Compliments From



**P. Palani**
Founder Secretary

# ISAAC NEWTON ENGLISH SCHOOL

Recognized by Gov. of Karnataka
No. 10, Mill Road, Cottonpet, Bengaluru - 560 053
Ph.: 080 2670 7040, 2670 7050

Dist. Commissioner (S), Bharat Scouts & Guides, Bengaluru South District





# ಜಿಲ್ಲಾ ವಾರ್ತೆಗಳು

## ಬಾಗಲಕೋಟೆ

ಏಪ್ರಿಲ್ 01 ರಂದು ಕೆ.ಜೆ. ಸೋಮಯ್ಯ ಆಂಗ್ಲ ಮಾಧ್ಯಮ ಶಾಲೆ ಸಮೀರವಾಡಿ ತಾಲ್ಲೂಕು, ಮುಧೋಳ ಇಲ್ಲಿ ಏಳು ದಿನಗಳ ಬೇಸಿಗೆ ಶಿಬಿರವನ್ನು ಏರ್ಪಡಿಸಲಾಗಿತ್ತು. ಉದ್ಘಾಟನಾ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ದೈಹಿಕ ಶಿಕ್ಷಣ ಪರೀವಿಕ್ಷಕರಾದ ಶ್ರೀ ಶ್ರೀಶೈಲಕುರ್ಣಿ, ತಾಲ್ಲೂಕು ಕಾರ್ಯದರ್ಶಿಗಳಾದ ಶ್ರೀ ಆರ್.ಡಿ. ಗಲಗಲಿ ಆಗಮಿಸಿದ್ದರು. ಶ್ರೀಮತಿ ಸ್ವಪ್ನಾ ಅಗೋಳ, ಪ್ರಾಚಾರ್ಯರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಿತು.




* ಏಪ್ರಿಲ್ 07 ರಂದು ಆರ್.ಎಂ.ಎಸ್.ಎ. ಲೋಕಾಪುರ ಲಕ್ಷಾನಟ್ಟಿ ಇಲ್ಲಿ ಬೇಸಿಗೆ ಶಿಬಿರ ಉದ್ಘಾಟಕರಾಗಿ ಶ್ರೀ ಎಂ.ಎಂ. ವಿರಕ್ತಮಠ ಉದ್ದಿಮೆದಾರರು ಮತ್ತು ಉಪಾಧ್ಯಕ್ಷರು ಸ್ಥಳೀಯ ಸಂಸ್ಥೆ ಮುಧೋಳ ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ಶ್ರೀ ಎಸ್.ಕೆ. ಸತ್ತಿಗೇರಿ, ಮುಖ್ಯೋಪಾಧ್ಯಾರು ಆದರ್ಶ ವಿದ್ಯಾಲಯ ಲೋಕಾಪುರ ಲಕ್ಷಾನಾಟ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಆರ್.ಡಿ. ಗಲಗಲಿ, ಶ್ರೀ ಕೆ.ಆರ್. ನಾಯಕ, ಶ್ರೀ ಹಣಮಂತ ಕೇರಿ ಹಾಗೂ ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.



## ಬೆಳಗಾವಿ

ಏಪ್ರಿಲ್ 01 ರಂದು ರಾಯಭಾಗ ತಾಲ್ಲೂಕಿನ ಹಂದಿಗುಂದ ಗ್ರಾಮದಲ್ಲಿ ತಾಲ್ಲೂಕು ಮಟ್ಟದ ಬೇಸಿಗೆ ಶಿಬಿರದ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಜಿಲ್ಲಾ ಮುಖ್ಯ ಆಯುಕ್ತರು, ಹಾಗೂ ಜಂಟಿ ನಿರ್ದೇಶಕರು, ಅಪರ ಆಯುಕ್ತರ ಕಾರ್ಯಾಲಯ, ಧಾರವಾಡ ಹಾಗೂ ಉಪಾಧ್ಯಕ್ಷರು ಭಾರತ್ ಸ್ಕೌಟ್ಸ್-ಗೈಡ್ಸ್ ಕರ್ನಾಟಕ ಆದ ಶ್ರೀ ಗಜಾನನ ಮನ್ನಿಕೇರಿ ಇವರು ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು. ನಂತರ ಮಾತನಾಡಿ "ರಾಯಭಾಗ ತಾಲ್ಲೂಕಿನ ಸ್ಕೌಟ್-ಗೈಡ್ ಚಟುವಟಿಕೆಗಳು ಚುರುಕಾಗಿ ನಡೆಯಬೇಕು" ಎಂದು ಹೇಳಿದರು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಆಯುಕ್ತರು (ಗೈಡ್) ಆದ ಶ್ರೀಮತಿ ಪ್ರಭಾವತಿ ಪಾಟೀಲ, ಸ್ಥಳೀಯ ಎಸ್.ವಿ.ಎಸ್. ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ವಿ.ಪಿ. ಮಠ, ಸಿ.ಆರ್.ಪಿ. ಕಾರ್ಯದರ್ಶಿ ಶ್ರೀ ವೈ.ಕೆ. ಭಜಂತ್ರಿ, ಸ್ಕೌಟ್-ಗೈಡ್ ಶಿಕ್ಷಕರುಗಳು ಉಪಸ್ಥಿತರಿದ್ದರು. ವಿವಿಧ ಶಾಲೆಗಳಿಂದ 200ಕ್ಕೂ ಹೆಚ್ಚು ಸ್ಕೌಟ್-ಗೈಡ್ ಮಕ್ಕಳು ಭಾಗವಹಿಸಿದ್ದರು, ಸ್ಕೌಟ್ ಮಾಸ್ಟರ್ ಶ್ರೀ ಟಿ.ಜಿ. ದಾಸಪ್ಪನವರ ಸ್ವಾಗತಿಸಿದರು. ಶ್ರೀ ಸಿ.ಎಸ್. ಹಿರೇಮಠ ವಂದಿಸಿದರು.



* ಏಪ್ರಿಲ್ 05 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ಭಾರತ್ ಸ್ಕೌಟ್ಸ್-ಗೈಡ್ಸ್ ಸ್ಥಳೀಯ ಸಂಸ್ಥೆ ಕಾಗವಾಡ ಇವರ ಸಹಯೋಗದಲ್ಲಿ ತಾಲ್ಲೂಕು ಮಟ್ಟದ ಬೇಸಿಗೆ ಶಿಬಿದ ಉದ್ಘಾಟನಾ ಸಮಾರಂಭವು ಕಾಗವಾಡ ತಾಲ್ಲೂಕಿನ ಶೇಡಬಾಳದ ಸನ್ಮತಿ ವಿದ್ಯಾಲಯದಲ್ಲಿ ಜರುಗಿತು. ಸಮಾರಂಭದ ಅಧ್ಯಕ್ಷತೆಯನ್ನು ಮಾನ್ಯ ಕೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎಂ.ಆರ್. ಮುಂಜೆ ವಹಿಸಿದ್ದರು.

ಎ.ಎಸ್.ಓ.ಸಿ. ಶ್ರೀ ಡಿ.ಬಿ. ಅತ್ತಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ನಂತರ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮಾತನಾಡುತ್ತಾ "ಮಕ್ಕಳು ಒಂದಲ್ಲ ಒಂದು ಚಟುವಟಿಕೆಯಲ್ಲಿ ಭಾಗವಹಿಸುತ್ತಿರಬೇಕು. ಇದರಿಂದ ವಿವಿಧ ರೀತಿಯಲ್ಲಿ ಜ್ಞಾನ ಪಡೆಯಲು ಸಹಾಯವಾಗುತ್ತದೆ. ಸಮವಸ್ತ್ರ ಧರಿಸಿದ ಮಕ್ಕಳು ಶಿಸ್ತಿನಿಂದ ಇರುತ್ತಾರೆ" ಎಂದು ಹೇಳಿದರು. ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್) ಶ್ರೀ ಆರ್.ಎಂ. ನಿಂಬಾಳಕರ, ದೈಹಿಕ ಶಿಕ್ಷಣ ಪರಿವೀಕ್ಷಕರಾದ ಶ್ರೀ ಎಂ.ವೈ. ಪೂಜಾರ, ಶ್ರೀ ದಿಲೀಪ್ ಕುಮಾರ್ ಜಾಧವ್ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ಎಂ.ಕೆ. ಕಾಳೇನಟ್ಟಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 150 ಸ್ಕೌಟ್ಸ್-ಗೈಡ್ಸ್‌ಗಳು ಹಾಗೂ 15 ಜನ ಶಿಕ್ಷಕರು ಭಾಗವಹಿಸಿದ್ದರು. ಶ್ರೀ ಎಸ್.ಎಂ. ಮುತಾಲಿಕ್ ಸ್ವಾಗತಿಸಿದರು. ಶ್ರೀ ಎಂ.ಕೆ. ಕಾಂಬಳೆ, ಕಾರ್ಯದರ್ಶಿ ವಂದಿಸಿದರು.



* ಏಪ್ರಿಲ್ 14 ರಿಂದ 16ರ ವರೆಗೆ ನಿಪ್ಪಾಣಿ ನಗರದ ಕೆ.ಎಲ್.ಇ.ಸಿ.ಬಿ.ಎಸ್.ಇ. ಶಾಲೆಯಲ್ಲಿ ಬೇಸಿಗೆ ಶಿಬಿರವು ಜರುಗಿತು. ಮೊದಲನೇ ದಿನ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸಹಾಯಕ ಜಿಲ್ಲಾ ಆಯುಕ್ತರು ಗೈಡ್ ಆದ ಶ್ರೀಮತಿ ರೇವತಿ ಮಠದ, ಶಾಲೆಯ ನೂತನ ಪ್ರಾಂಶುಪಾಲರಾದ ಶ್ರೀ ನಿತೇಶ ನಾಡೆ, ಶ್ರೀ ಪಿ.ವೈ. ಪಾಟೀಲ, ಶಾಲೆಯ ಎಲ್ಲ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು. ನಂತರ ಸಂವಿಧಾನ ಶಿಲ್ಪಿ, ಭಾರತರತ್ನ ಡಾ. ಬಾಬಾ ಸಾಹೇಬ ಅಂಬೇಡ್ಕರ್ ಇವರ 132ನೇ ಜಯಂತಿ ಆಚರಣೆ ನಿಮಿತ್ತ ಅಂಬೇಡ್ಕರ್‌ರವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಸಲ್ಲಿಸಲಾಯಿತು. ನಂತರ ದೀಪ ಬೆಳಗಿಸುವ ಮೂಲಕ ಬೇಸಿಗೆ ಶಿಬಿರವನ್ನು ಉದ್ಘಾಟಿಸಿದರು. ಶಿಬಿರದಲ್ಲಿ ವಿವಿಧ ಚಟುವಟಿಕೆಗಳನ್ನು ಮಾಡಿಸಲಾಯಿತು. ಶಿಬಿರದ ನಾಯಕತ್ವವನ್ನು ಶ್ರೀ ಪಿ.ವೈ. ಪಾಟೀಲ ವಹಿಸಿದ್ದರು. ಶಿಬಿರದಲ್ಲಿ 27 ಸ್ಕೌಟ್ ಮಕ್ಕಳು, 35 ಗೈಡ್ ಮಕ್ಕಳು ಭಾಗವಹಿಸಿದ್ದರು.



## ಬಳ್ಳಾರಿ

ಏಪ್ರಿಲ್ 06 ರಿಂದ 08ರ ವರೆಗೆ ಜಿಂದಾಲ್ ಆದರ್ಶ ವಿದ್ಯಾಲಯ, ತೋರಣಗಲ್ಲು, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆಯಲ್ಲಿ ಸ್ಕೌಟ್-ಗೈಡ್ ಮತ್ತು ಕಬ್, ಬುಲ್‌ಬುಲ್ ಮಕ್ಕಳ ಬೇಸಿಗೆ ಶಿಬಿರವನ್ನು ಶ್ರೀ ಪ್ರಶಾಂತ್ ಮುಳ್ಳೆ, ಪ್ರಾಂಶುಪಾಲರು, ಜಿಂದಾಲ್ ಆದರ್ಶ ವಿದ್ಯಾಲಯ ಇವರು ಉದ್ಘಾಟಿಸಿದರು. ಶ್ರೀಮತಿ ಭಾಗ್ಯವತಿ ಗುಂಜಾಲ್, ಮುಖ್ಯ ಗುರುಗಳು ಜಿಂದಾಲ್ ಆದರ್ಶ ವಿದ್ಯಾಲಯ, ಶ್ರೀಮತಿ ಮಲ್ಲೇಶ್ವರಿ ಜೆ., ಎ.ಎಸ್.ಒ.ಸಿ ಹಾಗೂ ಶ್ರೀ ಎಂ. ಭಾಷಾ ಜಿಲ್ಲಾ ಸಂಘಟಕರು, ಬಳ್ಳಾರಿ, ಸ್ಥಳೀಯ ಕಾರ್ಯದರ್ಶಿಗಳು ಶ್ರೀ ಜಿ.ಎಸ್. ಸೋಮಪ್ಪ, ಎಂ. ರವಿ ಸ್ಕೌಟ್ ಮಾಸ್ಟರ್, ಶ್ರೀಧರ್ ಸ್ಕೌಟ್ ಮಾಸ್ಟರ್, ಪದ್ಮಾ ಗೈಡ್ ಕ್ಯಾಪ್ಟನ್, ಎರ್ರಿಸ್ವಾಮಿ, ಕಬ್ ಮಾಸ್ಟರ್ ಮತ್ತು ಗೈಡ್ ಕ್ಯಾಪ್ಟನ್‌ಗಳು ಮತ್ತು ಫ್ಲಾಕ್ ಲೀಡರುಗಳು ಈ ಶಿಬಿರದಲ್ಲಿ ಉಪಸ್ಥಿತರಿದ್ದರು. ಈ ಶಿಬಿರದಲ್ಲಿ ಸುಮಾರು 150 ಮಕ್ಕಳು ಭಾಗವಹಿಸಿರುತ್ತಾರೆ.




* ಏಪ್ರಿಲ್ 17 ರಿಂದ 24ರ ವರೆಗೆ ಬೃಂದಾ ನ್ಯಾಷನಲ್ ಪಬ್ಲಿಕ್ ಶಾಲೆಯ ದಮ್ಮೂರು, ಬಳ್ಳಾರಿ ತಾಲ್ಲೂಕಿನಲ್ಲಿ ಸ್ಕೌಟ್-ಗೈಡ್ ಮತ್ತು ಕಬ್, ಬುಲ್‌ಬುಲ್ ಮಕ್ಕಳ ಬೇಸಿಗೆ ಶಿಬಿರವನ್ನು ಡಾ॥ ಭವ್ಯಾ ಶೇಖರ್, ಪೌಂಡರ್ ಮತ್ತು ಸಿ.ಇ.ಒ. ಬೃಂದಾ ನ್ಯಾಷನಲ್ ಪಬ್ಲಿಕ್ ಶಾಲೆಯ ಇವರು ಉದ್ಘಾಟಿಸಿದರು, ಈ ಶಿಬಿರದಲ್ಲಿ ಶ್ರೀಮತಿ ಮಲ್ಲೇಶ್ವರಿ ಜೆ., ಎ.ಎಸ್.ಒ.ಸಿ., ಶ್ರೀ ಎಂ. ಭಾಷಾ, ಜಿಲ್ಲಾ, ಸಂಘಟಕರು, ಬಳ್ಳಾರಿ ಶ್ರೀ ಎಂ. ನಾಗರಾಜ್, ಜಿಲ್ಲಾ ತರಬೇತಿ ಆಯುಕ್ತರು ಭಾಗವಹಿಸಿದ್ದರು.



## ಬೆಂಗಳೂರು ಗ್ರಾಮಾಂತರ

ಏಪ್ರಿಲ್ 01 ರಂದು ಜಿ.ಹೆಚ್.ಪಿ.ಎಸ್ ಬೋಧನಹೊಸಹಳ್ಳಿ ಇಲ್ಲಿ ಸಸಿಗೆ ನೀರೆರೆಯುವ ಮೂಲಕ ಬೇಸಿಗೆ ಶಿಬಿರ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಕೆ.ವಿ. ಶ್ಯಾಮಲಾ, ರಾಜ್ಯ ತರಬೇತಿ ಆಯುಕ್ತರು (ಗೈ) ಆಗಮಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿಗಳಾದ ಹಾಗೂ ದಳ ನಾಯಕರಾದ ಶ್ರೀ ಡಿ. ಶ್ರೀನಿವಾಸ್ ಪ್ರಸಾದ್, ಶ್ರೀಮತಿ ಶೈಲಜಾ ಆರ್. ಗೈಡ್ ಕ್ಯಾಪ್ಟನ್, ಶ್ರೀಮತಿ ಪುಷ್ಪಾವತಿ ಲೇಡಿ ಕಬ್ ಮಾಸ್ಟರ್ ಶಿಬಿರದಲ್ಲಿ 120 ಕಬ್, ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.



* ಏಪ್ರಿಲ್ 01 ರಂದು ಜಿ.ಹೆಚ್.ಪಿ.ಎಸ್. ಸಮೇತನಹಳ್ಳಿ ಇಲ್ಲಿ ಶ್ರೀಮತಿ ಕಲ್ಪನಾ. ಅರ್ ಸವಣೂರುರವರ ನಾಯಕತ್ವದಲ್ಲಿ ಬೇಸಿಗೆ ಶಿಬಿರ ಜರುಗಿತು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಕೆ.ವಿ. ಶ್ಯಾಮಲಾ, ರಾಜ್ಯ ತರಬೇತಿ ಆಯುಕ್ತರು (ಗೈ) ರವರು ಆಗಮಿಸಿದ್ದರು. ಶಿಬಿರದಲ್ಲಿ 50 ಸ್ಕೌಟ್ಸ್ ಮತ್ತು 50 ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಏಪ್ರಿಲ್ 03 ರಿಂದ 05ರ ವರೆಗೆ ಬೇಸಿಗೆ ಶಿಬಿರವು ಲಿಟ್ಲ್ ಏಂಜಲ್ಸ್ ನಳಂದಾ ಪ್ರೌಢಶಾಲೆ ಹಾಗೂ ಲಿಟ್ಲ್ ಏಂಜಲ್ಸ್ ಅನಂತಾ ಶಾಲೆ ದೊಡ್ಡಬಳ್ಳಾಪುರ. ಇಲ್ಲಿ ಶ್ರೀಮತಿ ಪಿ. ಸುನೀತಾ, ಹೆಚ್.ಡಬ್ಲ್ಯೂ.ಬಿ (ಗೈ) ಹಾಗೂ ಶ್ರೀಮತಿ ವನಜಾಕ್ಷಿ, ಲೇಡಿ ಸ್ಕೌಟ್ ಮಾಸ್ಟರ್ ನಾಯಕತ್ವದಲ್ಲಿ ಜರುಗಿತು. ಶಿಬಿರದಲ್ಲಿ 2295 ಕಬ್-ಬುಲ್‌ಬುಲ್, ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.



* ಏಪ್ರಿಲ್ 05 ರಂದು ಬುಧವಾರದಂದು ಬೇಸಿಗೆ ಶಿಬಿರವು 'ಮಹಾತ್ಮ ಗಾಂಧೀಜಿರವರ ಧ್ಯೇಯದೊಂದಿಗೆ' ಜಿ.ಹೆಚ್.ಪಿ.ಎಸ್. ಬೋಧನ ಹೊಸಹಳ್ಳಿ ಇಲ್ಲಿ ಶ್ರೀ ಡಿ. ಶ್ರೀನಿವಾಸ್ ಪ್ರಸಾದ್, ಜಿಲ್ಲಾ ಕಾರ್ಯದರ್ಶಿಗಳು ಹಾಗೂ ದಳನಾಯಕರು ಅವರ ನಾಯಕತ್ವದಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿ ಶ್ರೀ ನಾಗರಾಜ, ಜಿಲ್ಲಾ ಮುಖ್ಯ ಆಯುಕ್ತರು ಆಗಮಿಸಿದ್ದರು. ಶಿಬಿರದಲ್ಲಿ 120 ಕಬ್, ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಏಪ್ರಿಲ್ 05 ರಂದು ಬೇಸಿಗೆ ಶಿಬಿರ ಸಮಾರಂಭವು ಪ್ರಥಮ್ ಅಂತಾರಾಷ್ಟ್ರೀಯ ಶಾಲೆ, ವಾಲೇಪುರ. ಇಲ್ಲಿ ಶ್ರೀಮತಿ ಭಾರತಿ ಹೆಚ್.ಡಬ್ಲ್ಯೂ.ಬಿ (ಗೈ) ಹಾಗೂ ಶ್ರೀ ಆನಂದ್, ಸ್ಕೌಟ್ ಮಾಸ್ಟರ್ ನಾಯಕತ್ವದಲ್ಲಿ ಜರುಗಿತು. ಮುಖ್ಯ ಅತಿಥಿಗಳಾಗಿ ಶ್ರೀ ನಾಗರಾಜ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಡಿ. ಶ್ರೀನಿವಾಸ್ ಪ್ರಸಾದ್, ಜಿಲ್ಲಾ ಕಾರ್ಯದರ್ಶಿಗಳು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಈ ವರ್ಷದ ರಾಜ್ಯ ಪುರಸ್ಕಾರ ಪುರಸ್ಕೃತ ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಶಾಲಾ ಮುಖ್ಯಸ್ಥರಾದ ಶ್ರೀ ಹಿರೇಮಠ್, ಶ್ರೀಮತಿ ಜಗದೇವಿ ಹಿರೇಮಠ್ ಪ್ರಾಂಶುಪಾಲರು ಹಾಗೂ ಶ್ರೀ ಅರುಣ್‌ಕುಮಾರ್ ಹೆಚ್.ಕೆ., ಸ್ಕೌಟ್-ಗೈಡ್ ಸ್ವಯಂ ಸೇವಕರು ಹಾಗೂ ದಳನಾಯಕರು ಹಾಗೂ ಇತರರು ಉಪಸ್ಥಿತರಿದ್ದರು. ಶಿಬಿರದಲ್ಲಿ 20ಕಬ್, 20ಬುಲ್‌ಬುಲ್, 40ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.



* ಏಪ್ರಿಲ್ 11ರಂದು ಬೇಸಿಗೆ ಶಿಬಿರವು ಜಿ.ಎಲ್.ಪಿ.ಎಸ್. ಚೌಳುತೋಟ, ಕುಂಬಳಹಳ್ಳಿ ಇಲ್ಲಿ ಶ್ರೀ ಡಿ.ವಿ. ಮುನಿಸ್ವಾಮಿ, ಪ್ರೀ-ಎ.ಎಲ್.ಟಿ (ಸ್ಕೌ) ನಾಯಕತ್ವದಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿ ಶ್ರೀ ನಾಗರಾಜ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಶರಣಪ್ಪ ಕಂಬಳಿ, ಎ.ಎಲ್.ಟಿ (ಸ್ಕೌ), ಶ್ರೀ ಕೆ. ಜವರಯ್ಯ, ಎ.ಎಲ್.ಟಿ (ಸ್ಕೌ) ಆಗಮಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ರಾಮೇಗೌಡ, ಅಧ್ಯಕ್ಷರು ಶಾಲಾ ಎಸ್.ಡಿ.ಎಂ.ಸಿ., ಸ್ಥಳೀಯ ಸಂಸ್ಥೆಯ ಜಂಟಿ ಕಾರ್ಯದರ್ಶಿಗಳು ಹಾಗೂ ದಳನಾಯಕರಾದ ಶ್ರೀ ಡಿ.ವಿ. ಮುನಿಸ್ವಾಮಿ, ಪ್ರೀ-ಎ.ಎಲ್.ಟಿ (ಸ್ಕೌ), ಶ್ರೀಮತಿ ದೇವಿಕಾ, ಗೈಡ್ ಕ್ಯಾಪ್ಟನ್, ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಸ್. ವೆಂಕಟೇಶ್, ಪ್ರೀ-ಎ.ಎಲ್.ಟಿ(ಸ್ಕೌ), ಶ್ರೀ ಈರಣ್ಣ, ಪ್ರೀ-ಎ.ಎಲ್.ಟಿ(ಸ್ಕೌ), ಶ್ರೀ ಅರುಣ್ ಕುಮಾರ್ ಹೆಚ್.ಕೆ., ಸ್ಕೌಟ್-ಗೈಡ್ ಸ್ವಯಂ ಸೇವಕರು ಉಪಸ್ಥಿತರಿದ್ದರು.



* ಏಪ್ರಿಲ್ 12 ರಂದು ಬೇಸಿಗೆ ಶಿಬಿರಕ್ಕೆ ಜಿ.ಎಲ್.ಪಿ.ಎಸ್. ಚೌಳುತೋಟ, ಕುಂಬಳಹಳ್ಳಿ ಇಲ್ಲಿ ಚಾಲನೆ ನೀಡಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಕೆ.ವಿ. ಶ್ಯಾಮಲಾ, ರಾಜ್ಯ ತರಬೇತಿ ಆಯುಕ್ತರು(ಗೈ) ಹಾಗೂ ಶ್ರೀ ಡಿ. ಶ್ರೀನಿವಾಸ್ ಪ್ರಸಾದ್, ಜಿಲ್ಲಾ ಕಾರ್ಯದರ್ಶಿಗಳು ಆಗಮಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ರಾಮೇಗೌಡ, ಅಧ್ಯಕ್ಷರು ಶಾಲಾ ಎಸ್.ಡಿ.ಎಂ.ಸಿ, ಸ್ಥಳೀಯ ಸಂಸ್ಥೆಯ ಜಂಟಿ ಕಾರ್ಯದರ್ಶಿಗಳು ಹಾಗೂ ದಳನಾಯಕರಾದ ಶ್ರೀ ಡಿ.ವಿ. ಮುನಿಸ್ವಾಮಿ, ಪ್ರೀ–ಎ.ಎಲ್.ಟಿ(ಸ್ಕೌ), ಶ್ರೀಮತಿ ದೇವಿಕಾ, ಗೈಡ್‌ಕ್ಯಾಪ್ಟನ್, ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಕೆ. ಜವರಯ್ಯ, ಎ.ಎಲ್.ಟಿ(ಸ್ಕೌ), ಶ್ರೀ ಎಸ್ ವೆಂಕಟೇಶ್, ಪ್ರೀ–ಎ.ಎಲ್.ಟಿ(ಸ್ಕೌ), ಶ್ರೀಮತಿ ಚಂದ್ರಕಲಾ, ಹೊಸಕೋಟೆ ತಾಲ್ಲೂಕು ಕೋರ್ಟ್ ಶಿರಸ್ತೇದಾರರು, ಆಶಾ ಕಾರ್ಯಕರ್ತೆಯರಾದ ಶ್ರೀಮತಿ ಶಿಲ್ಪಾ ಹಾಗೂ ಶ್ರೀಮತಿ ಸುಶೀಲಾ ಉಪಸ್ಥಿತರಿದ್ದರು. ಆರೋಗ್ಯ ಇಲಾಖೆಯ ಶುಶ್ರೂಷಕರಾದ ಶ್ರೀಮತಿ ಹೊನ್ನಗಂಗಮ್ಮ ಮಕ್ಕಳಿಗೆ ಬಿಸ್ಕೆಟ್ ನೀಡಿ ಪ್ರೋತ್ಸಾಹಿಸಿದರು. ಶಿಬಿರದಲ್ಲಿ 85 ಕಬ್, ಬುಲ್‌ಬುಲ್ ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಏಪ್ರಿಲ್ 10 ರಿಂದ 14ರ ವರೆಗೆ ಕಾರ್ಮೆಲ್ ಜ್ಯೋತಿ ಪ್ರೌಢಶಾಲೆ, ರೋಜಿಪುರ, ದೊಡ್ಡಬಳ್ಳಾಪುರ ಇಲ್ಲಿ 5 ದಿನಗಳ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಸದರಿ ಶಿಬಿರದಲ್ಲಿ ಅತಿಥಿಗಳಾಗಿ ಶ್ರೀ ಸಿ. ವೆಂಕಟರಾಜು, ಜಿಲ್ಲಾ ಸಹಾಯಕ ಆಯುಕ್ತರು, ನಾಯಕರಾಗಿ ಶ್ರೀ ವೆಂಕಟೇಶ್, ಶ್ರೀಮತಿ ರಾಜೇಶ್ವರಿ, ಶ್ರೀ ತ್ರಿವೇಣಿ, ಸಹನಾಯಕರಾಗಿ ಶ್ರೀ ಮಲ್ಲಿಕಾರ್ಜುನ, ಶ್ರೀ ಪಲ್ಲವಿ ಹಾಗೂ ಇತರರು ಭಾಗವಹಿಸಿದ್ದರು. ಶಾಲೆಯ ಮುಖ್ಯಸ್ಥರಾದ ಶ್ರೀಮತಿ ರೋಜ್ ಶಶಿಕಲಾ, ಶ್ರೀಮತಿ ನೀಮಾ, ಕಾರ್ಯದರ್ಶಿಗಳಾದ ಶ್ರೀ ಅಪ್ಪುರಾಜ್ ಶಿಬಿರಕ್ಕೆ ಸಂಪೂರ್ಣ ಸಹಕಾರವನ್ನು ನೀಡಿದರು. ಸದರಿ ಶಿಬಿರದಲ್ಲಿ 80 ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಏಪ್ರಿಲ್ 11 ರಿಂದ 14ರ ವರೆಗೆ ಮಹಾತ್ಮ ಗಾಂಧಿ ಪ್ರೌಢಶಾಲೆ, ಚನ್ನರಾಯಪಟ್ಟಣ ಇಲ್ಲಿ ಬೇಸಿಗೆ ಶಿಬಿರವನ್ನು ಶ್ರೀ ಜಿ.ಎಸ್. ಮುದ್ದಪ್ಪನವರ್ ಪ್ರೀ–ಎ.ಎಲ್.ಟಿ(ಸ್ಕೌ)ರವರ ನಾಯಕತ್ವದಲ್ಲಿ ನಡೆಯಿತು. ಸದರಿ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ವೆಂಕಟೇಶ್ ಹೆಚ್.ಡಬ್ಲ್ಯೂ.ಬಿ(ಸ್ಕೌ) ಹಾಗೂ ಇತರರು ಭಾಗವಹಿಸಿ, ವಿಧ್ಯಾರ್ಥಿಗಳಿಗೆ ಸ್ಕೌಟ್ಸ್–ಗೈಡ್ಸ್‌ನ ಶಿಕ್ಷಣ ಹಾಗೂ ಅದಕ್ಕೆ ಪೂರಕವಾದ ಶಿಕ್ಷಣವನ್ನು ನೀಡಿದರು.

* ಏಪ್ರಿಲ್ 11 ರಿಂದ 14ರ ವರೆಗೆ ಶ್ರೀ ಸಿದ್ಧಗಂಗಾ ಪ್ರೌಢಶಾಲೆ, ಬೂದಿಗೆರೆ ಇಲ್ಲಿ ಬೇಸಿಗೆ ಶಿಬಿರವು ಶ್ರೀಮತಿ ಎಂ. ಸುಜಾತ, ನಾಯಕತ್ವದಲ್ಲಿ 4 ನಡೆಯಿತು.



## ಬೆಂಗಳೂರು ಉತ್ತರ

ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ಏಪ್ರಿಲ್ 04 ರಂದು ಆರ್.ಟಿ.ನಗರ ಸಮೂಹ ಸಂಸ್ಥೆ ಇಲ್ಲಿ ಜಂಬೂರಿಯಲ್ಲಿ ಭಾಗವಹಿಸಿದ ಘಟಕ ನಾಯಕರಿಗೆ ಅಭಿನಂದನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ರಾಜ್ಯ ಮುಖ್ಯ ಅಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಭಾಗವಹಿಸಿದ್ದರು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಬಿ.ಆರ್. ಪ್ರಸನ್ನಕುಮಾರ್‌ರವರು ಎಲ್ಲರನ್ನೂ ಸ್ವಾಗತಿಸಿದರು. ರಾಜ್ಯ ಮುಖ್ಯ ಆಯುಕ್ತರು ಸಭೆಯನ್ನು ಉದ್ದೇಶಿ "ತಮ್ಮಲ್ಲೆರ ಸಹಕಾರದಿಂದ ಜಂಬೂರಿ ಯಶಸ್ವಿಯಾಗಿದೆ" ಎಂದರು ಎಲ್ಲಾ ದಳ ನಾಯಕರಿಗೆ ಸ್ಮರಣಿಕೆಗಳನ್ನು ನೀಡಿ ಅಭಿನಂದಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಎಲ್ಲರಿಗೂ ಧನ್ಯವಾದ ಸಲ್ಲಿಸಿದರು. ಜಿಲ್ಲಾ ಗೈಡ್ಸ್ ಆಯುಕ್ತೆ ಶ್ರೀಮತಿ ವನಿತಾ ನಾರಾಯಣ ಹಾಗೂ ಜಿಲ್ಲಾ ಜಂಟಿ ಕಾರ್ಯದರ್ಶಿ ಗೈಡ್ಸ್ ಶ್ರೀಮತಿ ಪುಷ್ಪ ವಿಜಯನ್ ಉಪಸ್ಥಿತರಿದ್ದರು.



* ಬೆಲ್ ಶಿಕ್ಷಣ ಸಮೂಹ ಸಂಸ್ಥೆ ಜಾಲಹಳ್ಳಿ ಇಲ್ಲಿ ಬೆಲ್ ಕಾರ್ಮಿಕರ ಕಾಲೋನಿಯಲ್ಲಿ ಮತದಾನ ಜಾಗೃತಿ ಜಾಥವನ್ನು ಹಮ್ಮಿಕೊಳ್ಳಲಾಯಿತು.

* ಆರ್.ಟಿ.ನಗರ ಸ್ಥಳೀಯ ಸಂಸ್ಥೆ ವತಿಯಿಂದ ಮತದಾನ ಜನ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಆರ್.ಟಿ.ನಗರ ಮುಖ್ಯ ರಸ್ತೆಯಲ್ಲಿ ಚುನಾವಣೆಯಲ್ಲಿ ಎಲ್ಲರೂ ಮತದಾನ ಮಾಡುವಂತೆ ಘೋಷಣೆ ಹಾಗೂ ಭಿತ್ತಿ ಪತ್ರ ಪ್ರದರ್ಶಿಸಿದರು ಮತ್ತು ಜನರಲ್ಲಿ ಜಾಗೃತಿ ಮೂಡಿಸಿದ್ದರು. ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ಪ್ರಸನ್ನಕುಮಾರ್ ಇವರು ಜಾಥಾಕ್ಕೆ ಚಾಲನೆ ನೀಡಿದರು.



* ಬೆಂಗಳೂರು ಉತ್ತರ ಜಿಲ್ಲೆಯ ಎಸ್.ಜಿ.ಆರ್. ಆಂಗ್ಲ ಮಾಧ್ಯಮ ಶಾಲೆ ಬಾಣಸವಾಡಿ. ರಾಯನ್ ಇಂಟರ್ ನ್ಯಾಶನಲ್ ಸ್ಕೂಲ್ ಯಲಹಂಕ, ಚಾಮುಂಡಿ ಮುಕ್ತ ದಳ ಮಲ್ಲೇಶ್ವರಮ್, ಸ್ಟ್ಯಾಂಡರ್ಡ್ ಪಬ್ಲಿಕ್ ಸ್ಕೂಲ್





ದಾಸರಹಳ್ಳಿ, ಕ್ಲ್ಯೂನಿ ಕಾಲ್ಮೆಂಟ್ ಸ್ಕೂಲ್ ಮಲ್ಲೇಶ್ವರಮ್, ಮಾರುತಿ ವಿದ್ಯಾಲಯ ಸಮೂಹ ಸಂಸ್ಥೆಗಳು, ಶ್ರೀ ಅಯ್ಯಪ್ಪ ವಿದ್ಯಾಕೇಂದ್ರ ಸಿಬಿಎಸ್‌ಸಿ ಅಬ್ಬಿಕೆರೆ, ಆರ್.ಟಿ.ನಗರ ಸಮೂಹ ಸಂಸ್ಥೆ ಅರ್.ಟಿ.ನಗರ, ಶ್ರೀ ಅಯ್ಯಪ್ಪ ವಿದ್ಯಾಕೇಂದ್ರ ಸಂತೋಷ ನಗರ ಜಾಲಾಹಳ್ಳಿ, ಮೊರ್ಡನ್ ಆಂಗ್ಲ ಮಾಧ್ಯಮ ಸ್ಕೂಲ್ ಆರ್.ಟಿ.ನಗರ, ಸಂತ ಪ್ರಾನ್ಸಿಸ್ ಶಿವಾಜಿನಗರ, ಶಾಲೆಗಳಲ್ಲಿ ಬೇಸಿಗೆ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿತ್ತು.

* ಎಂ.ಇ.ಎಸ್. ಆರ್ಟ್ಸ್ ಕಾಮರ್ಸ್ ಮತ್ತು ಸೈನ್ಸ್ ಕಾಲೇಜು ಮಲ್ಲೇಶ್ವರ ಇಲ್ಲಿನ ರೋವರ್ಸ್-ರೇಂಜರ್ಸ್ ಮಲ್ಲೇಶ್ವರಮ್ ಸಾರ್ವಜನಿಕ ಪಾರ್ಕ್ ಹಾಗೂ ಜಿಲ್ಲಾ ಕಛೇರಿಯ ಹೊರಾಂಗಣ ಸ್ಥಳವನ್ನು ಸ್ವಚ್ಛತೆ ಮಾಡಿದರು.




* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ "ಸ್ಕೌಟ್ಸ್-ಗೈಡ್ಸ್ ನಡಿಗೆ ಹಳ್ಳಿ ಕಡೆಗೆ" ಎಂಬ ಸಮುದಾಯ ಸೇವಾ ಕಾರ್ಯಕ್ರಮದಡಿಯಲ್ಲಿ 9ನೇ ತಿಂಗಳ ಕಾರ್ಯಕ್ರಮವು ಮಾರ್ಚ್ 31 ರಂದು ಗಂಟಿಗಾನಹಳ್ಳಿಯಲ್ಲಿ ಯಲಹಂಕ ಬೆಂಗಳೂರು ಇಲ್ಲಿ ಸಮುದಾಯ ಸೇವೆ ಮಾಡಲಾಯಿತು. ಗಂಟಿಗಾನಹಳ್ಳಿಯ ನದಿಯ ದಂಡೆಯಲ್ಲಿ ಶೇಖರಣೆಗೊಂಡ ಪ್ಲಾಸ್ಟಿಕ್ ತ್ಯಾಜ್ಯವನ್ನು ತೆಗೆದು ಸ್ವಚ್ಛಗೊಳಿಸಲಾಯಿತು. ಕಾರ್ಯಕ್ರಮದಲ್ಲಿ ಗಂಟಿಗಾನಗಾಹಳ್ಳಿಯ ರಸ್ತೆಯಲ್ಲಿರುವ ಸರ್ಕಲ್‌ನ್ನು ಸ್ವಚ್ಛತೆ ಮಾಡಲಾಯಿತು. ಇದಕ್ಕೆ ಪಿ.ಡಿ.ಒ.ರವರು ತಮ್ಮ ಸಹಕಾರ ನೀಡಿದರು ಹಾಗು ನಮ್ಮ ಜತೆ ಸೇವೆಯಲ್ಲಿ ಭಾಗವಹಿಸಿದ್ದರು. ಬೆಂಗಳೂರು ಉತ್ತರ ಜಿಲ್ಲೆಯ ವಿವಿಧ ಕಾಲೇಜುಗಳಿಂದ ರೋವರ್ಸ್-ರೇಂಜರ್ಸ್ ಭಾಗವಹಿಸಿದ್ದರು.

* ಚಾಮುಂಡಿ ಮುಕ್ತ ದಳದ 99ನೇ ವಾರ್ಷಿಕ ಶಿಬಿರ ರಾಮನಗರಜಿಲ್ಲೆಯ ಶ್ರೀ ಬೆಟ್ಟದ ನೆತ್ತಿ ಭೈರವೇಶ್ವರ ದೇವಸ್ಥಾನದಲ್ಲಿ ಏಪ್ರಿಲ್ 14 ರಿಂದ 16ರ ವರೆಗೆ ನಡೆಯಿತು. ಶಿಬಿರದ ನಾಯಕರಾಗಿ ಶ್ರೀ ನರಸಿಂಹಮೂರ್ತಿ ಸಹಕರಿಸಿದರು. ಶಿಬಿರದಲ್ಲಿ ರೋವರ್ಸ್-ರೇಂಜರ್ಸ್, ಕಬ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್ 92 ಶಿಬಿರಾರ್ಥಿಗಳು ಭಾಗವಹಿಸಿದ್ದರು.

* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ಮಾರ್ಚ್ 25 ರಂದು ರಾತ್ರಿ 8.30 ರಿಂದ 9.30 ವರೆಗೆ ಅಗತ್ಯವಿರದ ವಿದ್ಯುತ್ ದೀಪ ಆರಿಸಿ. ಅರ್ತ್‌ಅವರ್‌ಡೇ ದಿನಾಚರಣೆಯನ್ನು ಆಚರಿಸಲಾಯಿತು.

## ಬೆಂಗಳೂರು ಪೂರ್ವ

* ಮಾರ್ಚ್ 15 ರಂದು ಆನೇಕಲ್‌ನ ಗುರುಭವನದಲ್ಲಿ ಬೆಂಗಳೂರು ಪೂರ್ವ ಜಿಲ್ಲಾ ಸಂಸ್ಥೆ ಆಶ್ರಯದಲ್ಲಿ 2021-22ನೇ ಸಾಲಿನ ರಾಜ್ಯ ಪುರಸ್ಕಾರ ಪ್ರಶಸ್ತಿ ಪುರಸ್ಕೃತ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್‌ಗಳಿಗೆ ಪ್ರಶಸ್ತಿ ಪ್ರಧಾನ ಹಾಗೂ ದೀರ್ಘಾವಧಿ ಸೇವೆ ಸಲ್ಲಿಸಿದ ಸ್ಕೌಟ್-ಗೈಡ್ ಶಿಕ್ಷಕರಿಗೆ ಸನ್ಮಾನ ಸಮಾರಂಭವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಜೆ.ಎಂ. ಜಯಲಕ್ಷ್ಮಿರವರು ವಹಿಸಿ ಮಾತನಾಡುತ್ತಾ "ಪ್ರತಿಯೊಂದು ಶಾಲೆಗಳಲ್ಲೂ ಸಹ ಮುಂದಿನ ಶೈಕ್ಷಣಿಕ ವರ್ಷದ ಪ್ರಾರಂಭದಿಂದಲೇ ಸ್ಕೌಟ್-ಗೈಡ್ ತಂಡಗಳನ್ನು ಪ್ರಾರಂಭಿಸಲು ಈಗಲೇ ಯೋಜನೆ ರೂಪಿಸಿಕೊಳ್ಳಬೇಕು" ಎಂದು ನುಡಿದರು.

ರಾಜ್ಯ ಆಯುಕ್ತ (ವಯಸ್ಕ ಸಂಪನ್ಮೂಲ) ಶ್ರೀ ಚಿನ್ನಸ್ವಾಮಿರೆಡ್ಡಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರ ಕುಮಾರ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶ್ರೀಮತಿ ಎಸ್.ಆರ್. ಕವಿತ, ಕ್ಷೇತ್ರ ಸಮನ್ವಯಾಧಿಕಾರಿ ಶ್ರೀ ಮುನೇಶ್, ದೈಹಿಕ ಶಿಕ್ಷಣ ಪರಿವೀಕ್ಷಕಿ ಶ್ರೀಮತಿ ನೇತ್ರಾವತಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷಶ್ರೀ ಕೆ. ಶಿವಣ್ಣ, ಖಜಾಂಚಿ ಶ್ರೀ ಜಿ. ನಾಗರಾಜು, ಸ್ಕೌಟ್ ಸಂಸ್ಥೆಯ ಹಿರಿಯ ತರಬೇತುದಾರ ಮಂಡ್ಯದ ಶ್ರೀ ಕೃಷ್ಣಮೂರ್ತಿ ಮೊದಲಾದವರು ಉಪಸ್ಥಿತರಿದ್ದರು.



* ಮಾರ್ಚ್ 31 ರಿಂದ 15ರ ವರೆಗೆ 2022–23ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಗಳು ಆರು ದಿನಗಳ ಕಾಲ ನಡೆದವು. ಆನೇಕಲ್ ತಾಲ್ಲೂಕಿನ 20 ಪರೀಕ್ಷಾ ಕೇಂದ್ರಗಳಲ್ಲಿಯೂ ಒಟ್ಟು 170 ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್, ಸ್ಕೌಟರ್–ಗೈಡರ್‌ಗಳು ಸೇವೆ ಸಲ್ಲಿಸಿದರು.



* ವಿವಿಧ ಶಾಲಾ ಕಾಲೇಜುಗಳಲ್ಲಿ ಬೇಸಿಗೆ ಶಿಬಿರಗಳನ್ನು ಆಯೋಜಿಸಲಾಯಿತು.

## ಬೀದರ್

* ಏಪ್ರಿಲ್ 03 ರಂದು ಡಾ. ಎಸ್.ಎಸ್. ಸಿದ್ದಾರೆಡ್ಡಿ ಫೌಂಡೇಶನ್ ವತಿಯಿಂದ ವೈದ್ಯ ಸಂತ ಡಾ. ಸಿದ್ದಾರೆಡ್ಡಿ ಅವರ ಸ್ಮರಣಾರ್ಥ ಬೀದರ್ ನಗರದ ಕರ್ನಾಟಕ ಸಾಹಿತ್ಯ ಸಂಘದ ಸಂಸ್ಕೃತಿಕ ಸಭಾಂಗಣದಲ್ಲಿ 2022–23ನೇ ಸಾಲಿನ ರಾಜ್ಯ ಪುರಸ್ಕಾರ ಪ್ರಶಸ್ತಿ ಪಡೆದ ಸ್ಕೌಟ್–ಗೈಡ್ ಮಕ್ಕಳಿಗೆ ಸನ್ಮಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಆಯುಕ್ತರಾದ ಡಾ. ಗುರಮ್ಮ ಸಿದ್ದಾರೆಡ್ಡಿ ಅವರು ವಹಿಸಿ ಮಾತನಾಡಿ, "ಡಾ. ಸಿದ್ದರೆಡ್ಡಿ ಅವರಿಗೆ ಮಕ್ಕಳೆಂದರೆ ತುಂಬಾ ಪ್ರೀತಿ ಮಾಡಿ ಸ್ಕೌಟ್–ಗೈಡ್ ಸಂಸ್ಥೆಯನ್ನು ಬೀದರ್‌ನಲ್ಲಿ ಹುಟ್ಟು ಹಾಕಿ ಸುಮಾರು 25 ವರ್ಷಗಳ ಕಾಲ ಸಂಸ್ಥೆಯ ಮುಖ್ಯ ಆಯುಕ್ತರಾಗಿ ಕಾರ್ಯನಿರ್ವಹಿಸಿದರು ಹಾಗಾಗಿ ಪ್ರತಿವರ್ಷ ಅವರ ಸ್ಮರಣಾರ್ಥ ಈ ಮಕ್ಕಳಿಗೆ ಸನ್ಮಾನಿಸುವ ಕಾರ್ಯ ನಡೆಸಲಾಗುತ್ತಿದೆ" ಎಂದರು. "2016ರಲ್ಲಿ ಡಾ. ಎಸ್.ಎಸ್. ಸಿದ್ದಾರೆಡ್ಡಿ ಫೌಂಡೇಶನ್ ಸ್ಥಾಪನೆ ಮಾಡಲಾಯಿತು. 2017ರಲ್ಲಿ "ಸಿದ್ಧಾರೂಢ ದೃಷ್ಟಿ ಆಸ್ಪತ್ರೆ" ನಡೆಯಿತು 2018ರಲ್ಲಿ ಚಳಕಾಪುರ ಸಿದ್ದಾರೂಢ ಜಾತ್ರೆಯಲ್ಲಿ ಕಣ್ಣಿನ ಉಚಿತ ತಪಾಸಣೆ ಮತ್ತು ಶಸ್ತ್ರಚಿಕಿತ್ಸೆ ನಡೆಸಲಾಯಿತು. 2019ರಲ್ಲಿ ಥಟ್ಟಂತ ಹೇಳಿ ಚಂದನ ವಾಹಿನಿಯಲ್ಲಿ ಗ್ರಾಮೀಣ ಪ್ರತಿಭೆಗೆ ಅವಕಾಶ, 2020ರಲ್ಲಿ ಕರೋನ ಸಂತ್ರಸ್ತರಿಗೆ ಸಹಾಯ ಹೀಗೆ ಅನೇಕ ರಚನಾತ್ಮಕ ಚಟುವಟಿಕೆಗಳನ್ನು ನಡೆಸಲಾಯಿತು" ಎಂದು ತಿಳಿಸಿದರು.




ಡಾ. ಎಸ್.ಎಸ್. ಸಿದ್ದಾರೆಡ್ಡಿ ಫೌಂಡೇಶನ್ ಅಧ್ಯಕ್ಷ ಡಾ. ವಿಕ್ರಮ್ ಸಿದ್ದಾರೆಡ್ಡಿ ಮಾತನಾಡಿ, "ನಮ್ಮ ತಂದೆಯವರಾದ ಡಾ. ಸಿದ್ದಾರೆಡ್ಡಿ ಅವರ ಕನಸು–ನನಸು ಮಾಡುವುದು ನಮ್ಮ ಆದ್ಯ ಕರ್ತವ್ಯ ಅವರ ಪ್ರಭಾವ ನನ್ನ ಮೇಲೆ ಬಿದ್ದು ನಾನು ಈ ಸಂಸ್ಥೆಯಿಂದ ರಾಷ್ಟ್ರ ಪ್ರಶಸ್ತಿಗೆ ಭಾಜನರಾಗಲು ಸಾಧ್ಯವಾಯಿತು" ಎಂದು ತಿಳಿಸಿದರು. ಶಾಹೀನ್ ಹಿಂದಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ. ಅಬ್ದುಲ್ ಖದೀರ್, ಕರ್ನಾಟಕ ಸಾಹಿತ್ಯ ಸಂಘದ ಅಧ್ಯಕ್ಷ ಡಾ. ಜಗನ್ನಾಥ್ ಹೆಬ್ಬಾಳೆ, ಜಿಲ್ಲಾ ಲೇಖಕಿಯರ ಸಂಘದ ಅಧ್ಯಕ್ಷ ಶ್ರೀಮತಿ ಭಾರತಿ ವಸ್ತ್ರದ್, ಕರ್ನಾಟಕ ಜಾನಪದ ಪರಿಷತ್ ತಾಲ್ಲೂಕು ಅಧ್ಯಕ್ಷ ಶ್ರೀ ಎಸ್.ಬಿ. ಕುಚಬಾಳ ಹಾಗೂ ಭಾರತ್ ಸ್ಕೌಟ್–ಗೈಡ್ ಜಿಲ್ಲಾ ಕಾರ್ಯದರ್ಶಿ ಡಾ. ಎಚ್.ಬಿ. ಭರಶೆಟ್ಟಿ ಮಾತನಾಡಿದರು. ಫೌಂಡೇಶನ್‌ನ ಸಂಚಾಲಕ ಶ್ರೀ ಕೆ.ಎಸ್. ಚಳಕಾಪುರೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಫೌಂಡೇಶನ್ ವತಿಯಿಂದ ರಾಜ್ಯ ಪ್ರಶಸ್ತಿ ಪಡೆದ ಸುಮಾರು ನೂರಕ್ಕೂ ಅಧಿಕ ಮಕ್ಕಳಿಗೆ ಸನ್ಮಾನಿಸಿ ಗೌರವಿಸಲಾಯಿತು. ಶ್ರೀಮತಿ ಲೀಲಾವತಿ ಚಕೋತೆ, ಕಿತ್ತೂರು ರಾಣಿಚೆನ್ನಮ್ಮ ಮಹಿಳಿ ಮಂಡಳ ಕಾರ್ಯದರ್ಶಿ ಶ್ರೀಮತಿ ಪುಣ್ಯವತಿ, ಅವರ ಕುಟುಂಬಸ್ಥರಾದ ಡಾ. ವೀಣಾ ಸಿದ್ದರೆಡ್ಡಿ ಡಾ. ರಾಜೇಶ್ರೀ ರೆಡ್ಡಿ ಹಾಗೂ ಇತರರು ವೇದಿಕೆಯಲ್ಲಿದ್ದರು. ಆರಂಭದಲ್ಲಿ ಕಲಾವಿದ ವೈಜನಾಥ್ ಶೆಟ್ಟಿ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು ಸ್ಕೌಟ್–ಗೈಡ್ ಜಿಲ್ಲಾ ಸಂಘಟಕಿ ಶ್ರೀಮತಿ ನಾಗರತ್ನ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಭಾರತೀಯ ಕುಟುಂಬ ಯೋಜನಾ ಸಂಸ್ಥೆಯ ವ್ಯವಸ್ಥಾಪಕ ಶ್ರೀ ಶ್ರೀನಿವಾಸ್ ಬರಾದಾ ವಂದಿಸಿದರು.

## ಚಾಮರಾಜನಗರ

ಚಾಮರಾಜನಗರ ಜಿಲ್ಲೆಯಲ್ಲಿ ಸ್ಥಳೀಯ ಸಂಸ್ಥೆಯ ವಿವಿಧ ಶಾಲೆಯ ದಳಮಟ್ಟದಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಸ್ಕೌಟ್ ಸಂಸ್ಥೆಯ ಧ್ಯೇಯೋದ್ದೇಶ ಮೂಲತತ್ವಗಳು ಹಾಗೂ ಸೇವಾ ಕಾರ್ಯಕ್ರಮಗಳು ಹಾಗೂ ಇನ್ನಿತರ ಸಾಹಸಮಯ ಕಾರ್ಯಕ್ರಮಗಳು ಕೂಡ ಈ ಶಿಬಿರದಲ್ಲಿ ಹಮ್ಮಿಕೊಳ್ಳಲಾಗಿತ್ತು.



* ಏಪ್ರಿಲ್ 18 ರಂದು ಚಾಮರಾಜನಗರ ಜಿಲ್ಲೆಯ ಕಾಲೇಜಿನ ರೋವರ್ಸ್‌ಗಳು ಸೈಕಲ್ ಜಾಥಾ ಮೂಲಕ ಮತದಾನ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಈ ಸಂದರ್ಭದಲ್ಲಿ ಹಳ್ಳಿಗಳಲ್ಲಿ ಜನಸಾಮಾನ್ಯರಿಗೆ ಮತದಾನದ ಅರಿವನ್ನು ಮೂಡಿಸಿದ್ದಾರೆ. ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮಾರ್ಗದರ್ಶನ ಹಾಗೂ ಸಹಕಾರವನ್ನು ನೀಡಿದರು.



## ಚಿಕ್ಕಬಳ್ಳಾಪುರ

ಭಾರತ್ ಸ್ಕೌಟ್ಸ್–ಗೈಡ್ಸ್ ಶಿಡ್ಲಘಟ್ಟ ಸ್ಥಳೀಯ ಸಂಸ್ಥೆ ಹಾಗೂ ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯಿತಿ ಸ್ವೀಪ್ ಕಮಿಟಿ ಶಿಡ್ಲಘಟ್ಟ ಇವರ ವತಿಯಿಂದ ಏಪ್ರಿಲ್ 08 ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ನಗರದಲ್ಲಿ "ಮತದಾನ ಜಾಗೃತಿ ಜಾಥಾ ಕಾರ್ಯಕ್ರಮ"ವನ್ನು ಹಮ್ಮಿಕೊಳ್ಳಲಾಯಿತು. ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಮುನಿರಾಜುರವರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ನರೇಂದ್ರ ಕುಮಾರ್‌ರವರು ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳ ಜಾಗೃತಿ ಜಾಥಾವನ್ನು ತಮಟೆ ಬಾರಿಸುವ ಮೂಲಕ ಉದ್ಘಾಟಿಸಿದರು. ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಮುನಿರಾಜುರವರು ಮಾತನಾಡಿ ಪ್ರಜಾಪ್ರಭುತ್ವದ ಉಳಿವಿಗಾಗಿ 18 ವರ್ಷ ತುಂಬಿದ್ದು, ಮತದಾರರ ಪಟ್ಟಿಯಲ್ಲಿ ಹೆಸರನ್ನು ನೋಂದಾಯಿಸಿರುವ ಪ್ರತಿಯೊಬ್ಬರು ಮುಂದಿನ ತಿಂಗಳು ಮೇ ಹತ್ತರಂದು ನಡೆಯಲಿರುವ ವಿಧಾನ ಸಭಾ ಚುನಾವಣೆಯಲ್ಲಿ ತಪ್ಪದೇ ಕಡ್ಡಾಯವಾಗಿ ಮತದಾನವನ್ನು ಮಾಡುವಂತೆ ತಮ್ಮ ತಮ್ಮ ಮನೆಗಳಲ್ಲಿ ಸುತ್ತಮುತ್ತಲ ಪ್ರದೇಶಗಳಲ್ಲಿ ಮತದಾರರಿಗೆ ಜಾಗೃತಿಯನ್ನು ಮೂಡಿಸುವ ಮೂಲಕ ಪ್ರಜಾಪ್ರಭುತ್ವದ ಹಬ್ಬವನ್ನು ಸಂಭ್ರಮಿಸಬೇಕೆಂದು ತಿಳಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ನರೇಂದ್ರ ಕುಮಾರ್‌ರವರು ಮಾತನಾಡಿ ತಾವೆಲ್ಲರೂ ವಿದ್ಯಾರ್ಥಿಗಳಾಗಿದ್ದರು ಸಹ ತಮಗೆ ಮತದಾನದ ಹಕ್ಕು ಇಲ್ಲದಿದ್ದರೂ ತಮ್ಮ ತಮ್ಮ ಮನೆಯಲ್ಲಿ ಮತ್ತು ಸುತ್ತಮುತ್ತಲಿನ ಜನರಲ್ಲಿ ಕಡ್ಡಾಯವಾಗಿ ಮತಚಲಾಯಿಸುವಂತೆ ಪ್ರೇರಣೆ ನೀಡಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಭಾರತ್ ಸ್ಕೌಟ್ಸ್–ಗೈಡ್ಸ್ ಸಂಸ್ಥೆಯ ಜಿಲ್ಲಾ ಕಾರ್ಯದರ್ಶಿ ಶ್ರೀ ಸಿ.ಬಿ. ಪ್ರಕಾಶ್‌ರವರು ಮಾತನಾಡಿ ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳು ಸಮಾಜಮುಖಿ ಕಾರ್ಯಗಳು ಮತ್ತು ಸೇವಾ ಕಾರ್ಯಗಳಿಗೆ ಸದಾ ಮುಂದಿದ್ದು ಅದರಂತೆ ಈಗ ನಡೆಯಲಿರುವ ಕರ್ನಾಟಕ ವಿಧಾನಸಭಾ ಚುನಾವಣೆ ಪ್ರಯುಕ್ತ ತಮ್ಮ ಮನೆಗಳಲ್ಲಿ ಹಾಗೂ ತಮ್ಮ ಸಮುದಾಯದಲ್ಲಿ ಅರ್ಹ ಮತದಾರರು ಕಡ್ಡಾಯವಾಗಿ ಮತದಾನವನ್ನು ಮಾಡಿ ಪ್ರಜಾಪ್ರಭುತ್ವವನ್ನು ಉಳಿಸಲು ಹಾಗೂ ರಾಷ್ಟ್ರದ ಪ್ರಗತಿಗೆ ಸಹಕಾರಿಯಾಗಲು ಕಡ್ಡಾಯವಾಗಿ ಮತದಾನ ಮಾಡುವಂತೆ ಜನರಲ್ಲಿ ಜಾಗೃತಿ ಮೂಡಿಸಬೇಕೆಂದು ತಿಳಿಸಿದರು.



## ದಾವಣಗೆರೆ

ಮಾರ್ಚ್ 20 ರಂದು ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಎಸ್.ಎಸ್.ಎಲ್.ಸಿ ನಂತರ ಮುಂದೇನು ಎನ್ನುವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ವಿವಿಧ ಶಾಲೆಯ ಮಕ್ಕಳು, ಪೋಷಕರು, ಶಿಕ್ಷಕರು ಭಾಗವಹಿಸಿದ್ದರು. ಸೆಂಟ್ ಪಾಲ್ಸ್ ಕಾನ್ವೆಂಟ್ ಶಾಲೆಯ ಗೈಡ್ಸ್ ಮಕ್ಕಳು ಉತ್ತಮ ಸೇವೆ ಸಲ್ಲಿಸಿದರು.



* ಮಾರ್ಚ್ 20 ರಿಂದ 23ರ ವರೆಗೆ ದಾವಣಗೆರೆ ಉತ್ತರ ಸ್ಥಳೀಯ ಸಂಸ್ಥೆಯ ಆರ್.ವಿ.ಜಿ.ಕೆ. ಪ್ರೌಢ ಶಾಲೆಯಲ್ಲಿ ಬೇಸಿಗೆ ಶಿಬಿರವು ನೆರವೇರಿತು. ಶ್ರೀ ಸುರೇಶ್ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಶಿಬಿರದ ನೇತೃತ್ವವಹಿಸಿದ್ದರು. ಶಿಬಿರದ ಸಮಾರೋಪ ಸಮಾರಂಭದಲ್ಲಿ ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ ಭಾಗವಹಿಸಿದ್ದರು.

* ಮಾರ್ಚ್ 24 ರಿಂದ 28ರ ವರೆಗೆ ದಾವಣಗೆರೆ ಉತ್ತರ ಸ್ಥಳೀಯ ಸಂಸ್ಥೆಯ ನಂದಗೋಕುಲ ಶಾಲೆಯಲ್ಲಿ ಬೇಸಿಗೆ ಶಿಬಿರವು ನೆರವೇರಿತು. ಶ್ರೀಮತಿ ಅನಸೂಯ ಮುಖ್ಯೋಪಾಧ್ಯಾಯರು ಮತ್ತು ಶಾಲೆಯ ಸ್ಕೌಟ್ ಮಾಸ್ಟರ್ ಗೈಡ್ ಕ್ಯಾಪ್ಟನ್ಸ್‌ಗಳು ಶಿಬಿರದ ನೇತೃತ್ವ ವಹಿಸಿದ್ದರು. ಶಿಬಿರದ ಸಮಾರೋಪ ಸಮಾರಂಭದಲ್ಲಿ ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ ಭಾಗವಹಿಸಿದ್ದರು.

* ಮಾರ್ಚ್ 29 ರಂದು ದಾವಣಗೆರೆ ಜಿಲ್ಲಾ ಸಂಸ್ಥೆಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ರೇಂಜರ್ಸ್‌ಗಳಿಗೆ ಮ್ಯೂಸಿಕಲ್ ಚೇರ್ ಮತ್ತು ಪ್ರಭಂದ ಸ್ಪರ್ಧೆಯನ್ನು ಆಯೋಜಿಸಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ ಜಿಲ್ಲಾ ಮುಖ್ಯ ಆಯುಕ್ತರು ಇವರ ಮಾರ್ಗದರ್ಶನದಲ್ಲಿ ಕಾರ್ಯಕ್ರಮವು ನೆರವೇರಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಶಾಂತಾ ಎಸ್. ಯಾವಗಲ್ ಉಪಾಧ್ಯಕ್ಷರು ಹಾಗೂ ಸಂಪಾದಕರು ಜಿಲ್ಲಾ ವಾರ್ತಾ ಪತ್ರಿಕೆ ಇವರು ವಹಿಸಿದ್ದರು. ಕಾರ್ಯಕ್ರಮದ ವಿಶೇಷ ಅತಿಥಿಗಳಾಗಿ ಡಾ॥ ಶಾಂತಾ ಭಟ್ ಸ್ತ್ರೀರೋಗ ತಜ್ಞರು ಹಾಗೂ ಕಸ–ರಸ ಅಭಿಯಾನದ ಅಧ್ಯಕ್ಷರು, ಶ್ರೀಮತಿ ಸರೋಜಮ್ಮ ಮುಂಡಾಸ ಅಕ್ಕಮಹಾದೇವಿ ಸಮಾಜದ ಸದಸ್ಯರು,

ಶ್ರೀಮತಿ ಮಮತ ಕಸ–ರಸ ಅಭಿಯಾನದ ಸದಸ್ಯರು, ಶ್ರೀಮತಿ ಶಾರದಾ ಮಗಾನಳ್ಳಿ ಜಿಲ್ಲಾ ಸಹಾಯಕ ಆಯುಕ್ತರು, ಡಾ॥ ಶಕುಂತಲಾ ರೇಂಜರ್ ವಿಭಾಗದ ಕೋ–ಆರ್ಡಿನೇಟರ್, ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಸುಖವಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿಗಳು, ಶ್ರೀಮತಿ ಸಿದ್ದಗಲಿಂಗಮ್ಮ, ಶ್ರೀಮತಿ ಸುಪ್ರೀಯ, ರೇಂಜರ್ ಲೀಡರ್‌ಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಕಾರ್ಯಕ್ರಮವನ್ನು ಯಶಸ್ವಿಯಾಗಿ ಸಂಘಟಿಸಿದರು.



* ಮಾರ್ಚ್ 27 ರಿಂದ 29ರ ವರೆಗೆ ದಾವಣಗೆರೆ ದಕ್ಷಿಣ ಸ್ಥಳೀಯ ಸಂಸ್ಥೆಯ ಜೈನ್ ವಿದ್ಯಾಲಯ ಶಾಲೆಯ ಬನ್ನೀಸ್ ಮಕ್ಕಳಿಗೆ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಜಿಲ್ಲಾ ಸಂಸ್ಥೆ ವತಿಯಿಂದ ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು ಹಾಗೂ ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಭಾಗವಹಿಸಿದ್ದರು.

* ಮಾರ್ಚ್ 28 ರಿಂದ ಏಪ್ರಿಲ್ 03ರ ವರೆಗೆ ಜಗಳೂರು ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಯರಲಕಟ್ಟೆ ಇಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಶ್ರೀಮತಿ ವಜ್ರ ಗಂಗಮ್ಮ ಎ.ಎಲ್.ಟಿ. ಗೈಡ್ ಇವರ ನೇತೃತ್ವದಲ್ಲಿ ಶಿಬಿರವು ಯಶಸ್ವಿಯಾಗಿ ನಡೆಯಿತು.

* ಮಾರ್ಚ್ 30 ರಿಂದ ಏಪ್ರಿಲ್ 01ರ ವರೆಗೆ ಎಸ್.ಎಸ್.ಎಸ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಗಿರಿ ಇಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಯಿತು. ಶಿಬಿರದ ಉದ್ಘಾಟನಾ ಸಮಾರಂಭವನ್ನು ಪ್ರೊ. ಹಾಲಸಿದ್ದಪ್ಪ ಪ್ರಾಂಶುಪಾಲರು ಉದ್ಘಾಟಿಸಿದರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

* ಏಪ್ರಿಲ್ 01 ರಿಂದ 03ರ ವರೆಗೆ ರಾಘವೇಂದ್ರ ವಿದ್ಯಾ ನಿಕೇತನ ಶಾಲೆಯಲ್ಲಿ ಬೇಸಿಗೆ ಶಿಬಿರವನ್ನು ಉದ್ಘಾಟಿಸಲಾಯಿತು. ಶಿಬಿರದ ಉದ್ಘಾಟನೆಯನ್ನು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಮಂಜುನಾಥ್‌ರವರು ನೆರವೇರಿಸಿದರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

* ಏಪ್ರಿಲ್ 01 ರಿಂದ 04ರ ವರೆಗೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಎಸ್.ಪಿ.ಎಸ್. ನಗರ ಶಾಲೆಯಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಯಿತು. ಶಿಬಿರದ ಉದ್ಘಾಟನೆಯನ್ನು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ನಾಗರಾಜ್ ನಾಯಕ್ ನೆರವೇರಿಸಿದರು.

* ಏಪ್ರಿಲ್ 02 ರಂದು ರಾಘವೇಂದ್ರ ವಿದ್ಯಾ ನಿಕೇತನ ಶಾಲೆಯ ಮಕ್ಕಳು ರಾಜ್ಯ ತರಬೇತಿ ಕೇಂದ್ರ ಕೊಂಡಜ್ಜಿಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಮತ್ತು ಶ್ರೀ ಮುಸ್ತಫ



ಯುವ ಸಮಿತಿ ಅಧ್ಯಕ್ಷರು, ಶ್ರೀ ದೀಪಕ್ ಸದಸ್ಯರು ಹಾಗೂ ಶ್ರೀ ನಿಂಗರಾಜು ಸ್ಕೌಟ್ ಮಾಸ್ಟರ್ ಉಪಸ್ಥಿತರಿದ್ದರು.

* ಏಪ್ರಿಲ್ 03 ರಂದು ಜೈನ್ ವಿದ್ಯಾಲಯ ಶಾಲೆಯಜೈನ್ ಸ್ಕೌಟ್ ಟ್ರೂಪ್ ಮತ್ತು ಜೈನ್ ಗೈಡ್ ಕಂಪನಿಯ ವತಿಯಿಂದ ಉಚ್ಚಂಗಿದುರ್ಗ ಬೆಟ್ಟಕ್ಕೆ ಚಾರಣ ಶಿಬಿರವನ್ನು ಆಯೋಜಿಸಲಾಗಿತ್ತು. 35 ಸ್ಕೌಟ್ಸ್ ಮತ್ತು 23 ಗೈಡ್ಸ್‌ಗಳು ಭಾಗವಹಿಸಿದ್ದರು.



* ಏಪ್ರಿಲ್ 05 ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಎಸ್.ಪಿ.ಎಸ್. ನಗರ ಇಲ್ಲಿ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ಆರ್. ಸುಖವಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿಗಳು, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಭಾಗವಹಿಸಿದ್ದರು.




* ಏಪ್ರಿಲ್ 04 ರಿಂದ 06ರ ವರೆಗೆ ಹೊನ್ನಾಳಿ ತಾಲ್ಲೂಕು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ನೆಲಹೊನ್ನೆ ತಾಂಡದಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಮಕ್ಕಳಿಗೆ ಪ್ರಾರ್ಥನೆ, ಧ್ವಜಗೀತೆ, ಬ್ಯಾಂಡೇಜ್ ಮತ್ತು ವಿವಿಧ ರೀತಿಯ ಗಂಟುಗಳು ಬಗ್ಗೆ ಮಾಹಿತಿಯನ್ನು ನೀಡಲಾಯಿತು.

* ಏಪ್ರಿಲ್ 03 ರಿಂದ 06ರ ವರೆಗೆ ಹರಿಹರ ತಾಲ್ಲೂಕು ಸೆಂಟ್ ಮೇರಿಸ್ ಕಾನ್ವೆಂಟ್ ಶಾಲೆಯಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರಕ್ಕೆ ಆರೋಗ್ಯಾಧಿಕಾರಿಗಳು, ಪೋಲಿಸ್

ಅಧಿಕಾರಿಗಳು ಭೇಟಿ ನೀಡಿ ಮಕ್ಕಳಿಗೆ ಮಾಹಿತಿ ನೀಡಿದರು. ಜಿಲ್ಲಾ ಸಂಸ್ಥೆ ವತಿಯಿಂದ ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ., ಶ್ರೀ ಮುಸ್ತಫ ಯುವ ಸಮಿತಿ ಸದಸ್ಯರು ಪಾಲ್ಗೊಂಡಿದ್ದರು. ಸ್ಕೌಟ್ ಮಾಸ್ಟರ್‌ಗಳಾದ ಶ್ರೀ ಜ್ಞಾನಪ್ರಕಾಶ್, ಶ್ರೀ ಮೋಹನ್, ಶ್ರೀ ರಾಜು, ಗೈಡ್ ಕ್ಯಾಪ್ಟನ್ ಶ್ರೀಮತಿ ಶಶಿಕಲಾ ಬೇಸಿಗೆ ಶಿಬಿರವನ್ನು ನಡೆಸಿಕೊಟ್ಟರು.

* ಏಪ್ರಿಲ್ 07 ರಂದು ದಾವಣಗೆರೆ ಜಿಲ್ಲಾ ಸಂಸ್ಥೆ ಮತ್ತು ಅಕ್ಕಮಹಾದೇವಿ ಸಮಾಜದ ವತಿಯಿಂದ ರೇಂಜರ್ಸ್‌ಗಳಿಗೆ ಕೌದಿ ಹೊಲಿಯುವ ತರಬೇತಿ ಮತ್ತು ಬ್ಯೂಟಿಷಿಯನ್ ತರಬೇತಿ ಕಾರ್ಯಕ್ರಮವನ್ನು ಜಿಲ್ಲಾ ಸಂಸ್ಥೆಯಲ್ಲಿ ಆಯೋಜಿಸಲಾಗಿತ್ತು. ಅಕ್ಕಮಹಾದೇವಿ ಸಮಾಜದ ಶ್ರೀಮತಿ ಚಂದ್ರಕಲಾ ಸಂಗಪ್ಪ ಹರೋಡೆರವರು ಕೌದಿಯನ್ನು ಹೊಲಿಯುವ ಬಗ್ಗೆ ಪ್ರಾತ್ಯಕ್ಷಿಕವಾಗಿ ಮಾಹಿತಿ ನೀಡಿದರು. ಶ್ರೀಮತಿ ಸೌಮ್ಯ ಬ್ಯೂಟಿಷಿಯನ್ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಅಕ್ಕಮಹಾದೇವಿ ಸಮಾಜದ ಅಧ್ಯಕ್ಷರಾದ ಶ್ರೀಮತಿ ಉಮಾ ವೀರಭದ್ರಪ್ಪ, ಉಪಾಧ್ಯಕ್ಷರಾದ ಶ್ರೀಮತಿ ನೀಲಗುಂದ ಜಯಮ್ಮ, ಕಸೂತಿ ವಿಭಾಗದ ಅಧ್ಯಕ್ಷರಾದ ಶ್ರೀಮತಿ ಸರೋಜಮ್ಮ ಮುಂಡಾಸ, ಜಿಲ್ಲಾ ಸಂಸ್ಥೆಯ ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು ಉಪಸ್ಥಿತರಿದ್ದರು.

* ಏಪ್ರಿಲ್ 08 ರಂದು ಜಗಳೂರು ಸ್ಥಳೀಯ ಸಂಸ್ಥೆ ಜೆ.ಎಂ. ಇಮಾಮ್ ಶಾಲೆಯಲ್ಲಿ ಬೇಸಿಗೆ ಶಿಬಿರವು ಯಶಸ್ವಿಯಾಗಿ ನಡೆಯಿತು.

* ಏಪ್ರಿಲ್ 08 ರಂದು ದಾವಣಗೆರೆ ಉತ್ತರ ವಲಯ ಸ್ಥಳೀಯ ಸಂಸ್ಥೆ ಸೆಂಟ್ ಪೀಟರ್ ಶಾಲೆಯಲ್ಲಿ ಬೇಸಿಗೆ ಶಿಬಿರವು ಯಶಸ್ವಿಯಾಗಿ ನಡೆಯಿತು.

*ಏಪ್ರಿಲ್ 08 ರಂದು ಸಿದ್ದಗಂಗಾ ಸ್ಥಳೀಯ ಸಂಸ್ಥೆಯ ಶ್ರೀ ಸಿದ್ದಗಂಗಾ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಮತ್ತು ಸಿ.ಬಿ.ಎಸ್.ಸಿ. ಶಾಲೆಯಲ್ಲಿ ಬೇಸಿಗೆ ಶಿಬಿರವು ಯಶಸ್ವಿಯಾಗಿ ನೆರವೇರಿತು.

* ಏಪ್ರಿಲ್ 08 ರಂದು ಹೊನ್ನಾಳಿ ಸ್ಥಳೀಯ ಸಂಸ್ಥೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕುಳಗಟ್ಟೆ ಇಲ್ಲಿ ಬೇಸಿಗೆ ಶಿಬಿರವು ಯಶಸ್ವಿಯಾಗಿ ನಡೆಯಿತು.

* ಏಪ್ರಿಲ್ 05 ರಿಂದ 08ರ ವರೆಗೆ ದಾವಣಗೆರೆ ದಕ್ಷಿಣ ವಲಯ ಸ್ಥಳೀಯ ಸಂಸ್ಥೆಯ ಜೈನ್ ವಿದ್ಯಾಲಯ ಶಾಲೆಯಲ್ಲಿ ಬೇಸಿಗೆ ಶಿಬಿರವು ನೆರವೇರಿತು. ಯುವ ಸಮಿತಿ ಸದಸ್ಯರುಗಳಾದ ಶ್ರೀ ಮುಸ್ತಫ, ಅಜಯ್, ಶಾಂತಾರವರು ಮಕ್ಕಳಿಗೆ ಗಂಟುಗಳು ಮತ್ತು ಬ್ಯಾಂಡೇಜ್ ಬಗ್ಗೆ ಮಾಹಿತಿ ನೀಡಿದರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಕಂಪಾಸ್, ಧ್ವಜಗಳು, ಸರ್ವಧರ್ಮ ಪ್ರಾರ್ಥನೆ ಬಗ್ಗೆ ಮಾಹಿತಿ ನೀಡಿದರು. ಶಾಲೆಯ ಸ್ಕೌಟ್ ಮಾಸ್ಟರ್ ಶ್ರೀ ಕೊಟ್ರಯ್ಯ ಮತ್ತು ಗೈಡ್ ಕ್ಯಾಪ್ಟನ್ ಶ್ರೀಮತಿ ಮಂಜುಳ ಶಿಬಿರವನ್ನು ನಡೆಸಿಕೊಟ್ಟರು.

* ಏಪ್ರಿಲ್ 07 ರಿಂದ 09ರ ವರೆಗೆ ದಾವಣಗೆರೆ ದಕ್ಷಿಣ ವಲಯ ಸ್ಥಳೀಯ ಸಂಸ್ಥೆಯ ರಾಷ್ಟ್ರೋತ್ಥಾನ ಶಾಲೆಯಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು ಶಿಬಿರಕ್ಕೆ ಭೇಟಿ ನೀಡಿದ್ದರು. ಸ್ಕೌಟ್ ಮಾಸ್ಟರ್ ಶ್ರೀ ಸಂತೋಷ್, ಗೈಡ್ ಕ್ಯಾಪ್ಟನ್ ಶ್ರೀಮತಿ ಕೃಷ್ಣವೇಣಿ ಶಿಬಿರವನ್ನು ಅಚ್ಚುಕಟ್ಟಾಗಿ ನೆರವೇರಿಸಿದರು.

* ಏಪ್ರಿಲ್ 08 ರಂದು ಹೊನ್ನಾಳಿ ಸ್ಥಳೀಯ ಸಂಸ್ಥೆಯ ಮೊರಾರ್ಜಿ ದೇಸಾಯಿ ಶಾಲೆಯಲ್ಲಿ ಬೇಸಿಗೆ ಶಿಬಿರವು ನಡೆಯಿತು. ಶ್ರೀ ಕಾಂತಕುಮಾರ್, ಸ್ಕೌಟ್ ಮಾಸ್ಟರ್ ಶಿಬಿರದ ನೇತೃತ್ವವಹಿಸಿದ್ದರು.

* ಏಪ್ರಿಲ್ 08 ರಂದು ಜಗಳೂರು ಸ್ಥಳೀಯ ಸಂಸ್ಥೆಯ ಜೆ.ಎಮ್. ಇಮಾಮ್ ಶಾಲೆಯಲ್ಲಿ ಬೇಸಿಗೆ ಶಿಬಿರವು ನಡೆಯಿತು.

* ಏಪ್ರಿಲ್ 08 ರಂದು ದಾವಣಗೆರೆ ಉತ್ತರ ಸ್ಥಳೀಯ ಸಂಸ್ಥೆಯ ನ್ಯೂ ಸೆಂಟ್ ಪೀಟರ್ ಶಾಲೆಯಲ್ಲಿ ಬೇಸಿಗೆ ಶಿಬಿರವು ನಡೆಯಿತು.

* ಏಪ್ರಿಲ್ 08 ರಂದು ಸಿದ್ದಗಂಗಾ ಸ್ಥಳೀಯ ಸಂಸ್ಥೆಯ ಶ್ರೀ ಸಿದ್ದಗಂಗಾ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಸಿ.ಬಿ.ಎಸ್.ಸಿ. ಶಾಲೆಯಲ್ಲಿ ಬೇಸಿಗೆ ಶಿಬಿರವು ನಡೆಯಿತು.

* ಏಪ್ರಿಲ್ 08 ರಂದು ಹೊನ್ನಾಳಿ ಸ್ಥಳೀಯ ಸಂಸ್ಥೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕುಳಗಟ್ಟೆ ಇಲ್ಲಿ ಬೇಸಿಗೆ ಶಿಬಿರವು ನಡೆಯಿತು.

* ಏಪ್ರಿಲ್ 05. ರಂದು 08ರ ವರೆಗೆ ದಕ್ಷಿಣ ವಲಯ ಸ್ಥಳೀಯ ಸಂಸ್ಥೆಯ ಜೈನ್ ವಿದ್ಯಾಲಯ ಶಾಲೆಯಲ್ಲಿ ಬೇಸಿಗೆ ಶಿಬಿರವು ನಡೆಯಿತು. ಶ್ರೀ ಕೊಟ್ರಯ್ಯ, ಸ್ಕೌಟ್ ಮಾಸ್ಟರ್, ಶ್ರೀಮತಿ ಮಂಜುಳ, ಗೈಡ್ ಕ್ಯಾಪ್ಟನ್ ಅಚ್ಚುಕಟ್ಟಾಗಿ ಬೇಸಿಗೆ ಶಿಬಿರವನ್ನು ಯಶಸ್ವಿಗೊಳಿಸಿದರು.

* ಏಪ್ರಿಲ್ 07 ರಿಂದ 09ರ ವರೆಗೆ ದಾವಣಗೆರೆ ದಕ್ಷಿಣ ವಲಯ ಸ್ಥಳೀಯ ಸಂಸ್ಥೆಯ ರಾಷ್ಟ್ರೋತ್ಥಾನ ಶಾಲೆಯಲ್ಲಿ ಬೇಸಿಗೆ ಶಿಬಿರವು ನಡೆಯಿತು. ಶ್ರೀ ಸಂತೋಷ್, ಸ್ಕೌಟ್ ಮಾಸ್ಟರ್, ಶ್ರೀಮತಿ ಕೃಷ್ಣವೇಣಿ, ಗೈಡ್ ಕ್ಯಾಪ್ಟನ್ ಶಿಬಿರವನ್ನು ನಡೆಸಿಕೊಟ್ಟರು.

* ಏಪ್ರಿಲ್ 04 ರಿಂದ 06ರ ವರೆಗೆ ಚನ್ನಗಿರಿ ಸ್ಥಳೀಯ ಸಂಸ್ಥೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ತನ್ನಿಗೆರೆಯಲ್ಲಿ ಬೇಸಿಗೆ ಶಿಬಿರವು ನೆರವೇರಿತು.

* ಏಪ್ರಿಲ್ 12 ರಿಂದ 13ರ ವರೆಗೆ ದಾವಣಗೆರೆ ದಕ್ಷಿಣ ವಲಯ ಸ್ಥಳೀಯ ಸಂಸ್ಥೆಯ ಅಮೃತ ವಿದ್ಯಾಲಯ ಶಾಲೆಯಲ್ಲಿ ಬೇಸಿಗೆ ಶಿಬಿರವು ನೆರವೇರಿತು.

* ಏಪ್ರಿಲ್ 14 ರಂದು ಧ.ರಾ.ಮ ಸ್ಕೌಟ್ ಭವನದಲ್ಲಿ ಸಂವಿಧಾನ ಶಿಲ್ಪಿ ಡಾ॥ ಬಿ.ಆರ್. ಅಂಬೇಡ್ಕರ್‌ರವರ 132ನೇ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು.



* ಏಪ್ರಿಲ್ 12 ರಿಂದ 14ರ ವರೆಗೆ ವಿದ್ಯಾ ಸಾಗರ್ ಕಾನ್ವೆಂಟ್ ಶಾಲೆಯಲ್ಲಿ ಬೇಸಿಗೆ ಶಿಬಿರವು ನಡೆಯಿತು.

## ದಕ್ಷಿಣ ಕನ್ನಡ

ಮಾರ್ಚ್ 17 ರಂದು ಉಳ್ಳಾಲ ತಾಲೂಕಿನ ಮೊದಲ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ರೋವರ್–ರೇಂಜರ್, ಸ್ಕೌಟ್ಸ್–ಗೈಡ್ಸ್‌ಗಳು ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದರು. ಶ್ರೀ ತ್ಯಾಗಂ ಹರೇಕಳ ರಾಜ್ಯ ಸ್ಕೌಟ್ ಪ್ರತಿನಿಧಿ, ಶ್ರೀಮತಿ ಫ್ಲೇವಿ ಡಿ. ಸೋಜ ಜಿಲ್ಲಾ ಸಂಘಟನಾ ಶಿಕ್ಷಕಿ, ಶ್ರೀಮತಿ ರೀನಾ ಲೇಡಿ ಸ್ಕೌಟ್ ಮಾಸ್ಟರ್, ಶ್ರೀಮತಿ ನಯನ ಗೈಡ್ ಕ್ಯಾಪ್ಟನ್ ಇವರು ನಾಯಕತ್ವವನ್ನು ವಹಿಸಿದರು.

* ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ವತಿಯಿಂದ ಮಾರ್ಚ್ 28ರಂದು ಸ್ಕೌಟ್ಸ್ ಮತ್ತು ಗೈಡ್ಸ್ ಕನ್ನಡ ಭವನ ಸ್ವರಾಜ್ಯ ಮೈದಾನ ಮೂಡಬಿದ್ರೆಯಲ್ಲಿ 2022–23ನೇ ಸಾಲಿನ ಜಿಲ್ಲಾ ಮಟ್ಟದ ತೃತೀಯ ಚರಣ ಕಬ್ ಮತ್ತು ಸುವರ್ಣ ಗರಿ ಬುಲ್ಬುಲ್ ಪರೀಕ್ಷಾ ಶಿಬಿರದ ಮೊದಲ ಹಂತದ ಪರೀಕ್ಷೆಯು ಬಹಳ ಯಶಸ್ವಿಯಾಗಿ ನಡೆಯಿತು. ಕಬ್ ವಿಭಾಗದ ನಾಯಕಿಯಾಗಿ ಶ್ರೀಮತಿ ಗೀತಾ ಶೆಟ್ಟಿ ಪ್ರಿ.ಎ.ಎಲ್.ಟಿ (ಕಬ್) ಹಾಗೂ ಬುಲ್ಬುಲ್ ವಿಭಾಗದಲ್ಲಿ ಶ್ರೀಮತಿ ಸಂಧ್ಯಾ ಶೆಣೈ ಎ.ಎಲ್.ಟಿ (ಫ್ಲಾ)ರವರು ನಾಯಕರಾಗಿ ಸಹಕರಿಸಿದರು. ಕಬ್ ವಿಭಾಗದಲ್ಲಿ ಒಟ್ಟು 43 ವಿದ್ಯಾರ್ಥಿಗಳು ಹಾಗೂ ಬುಲ್ಬುಲ್ ವಿಭಾಗದಲ್ಲಿ ಒಟ್ಟು 57 ವಿದ್ಯಾರ್ಥಿಗಳು ಒಟ್ಟು 100 ವಿದ್ಯಾರ್ಥಿಗಳು ಪರೀಕ್ಷಾ ಶಿಬಿರದಲ್ಲಿ ಭಾಗವಹಿಸಿದರು. ಶ್ರೀ ಭರತ್ರಾಜ್ ಕೆ ರಾಜ್ಯ ಸಹಾಯಕ ಸಂಘಟನಾ ಆಯುಕ್ತರು ಪರೀಕ್ಷಾ ಶಿಬಿರವನ್ನು ಸಂಘಟಿಸಿದರು.

* ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ವತಿಯಿಂದ ಮಾರ್ಚ್ 29 ರಂದು ಸೂರ್ಯವಂಶ ಸಭಾಭವನ ಕೈಕಂಬ, ಬಿ.ಸಿರೋಡ್, ಬಂಟ್ವಾಳದಲ್ಲಿ 2022–23ನೇ ಸಾಲಿನ ಜಿಲ್ಲಾ ಮಟ್ಟದ ತೃತೀಯ ಚರಣ್ ಕಬ್ ಮತ್ತು ಸುವರ್ಣ ಗರಿ ಬುಲ್ಬುಲ್ ಪರೀಕ್ಷಾ ಶಿಬಿರದ ಎರಡನೇ ಹಂತದ ಪರೀಕ್ಷೆಯು ಬಹಳ ಯಶಸ್ವಿಯಾಗಿ ನಡೆಯಿತು.

ಕಬ್ ವಿಭಾಗದ ನಾಯಕಿಯಾಗಿ ಶ್ರೀಮತಿ ವೀಣಾ (ಕಬ್) ಹಾಗೂ ಬುಲ್ಬುಲ್ ವಿಭಾಗದಲ್ಲಿ ಶ್ರೀಮತಿ ನಿಶ್ಮಿತಾ (ಫ್ಲಾ) ರವರು ನಾಯಕರಾಗಿ ಸಹಕರಿಸಿದರು. ಕಬ್ ವಿಭಾಗದಲ್ಲಿ ಒಟ್ಟು 57 ವಿದ್ಯಾರ್ಥಿಗಳು ಹಾಗೂ ಬುಲ್ಬುಲ್ ವಿಭಾಗದಲ್ಲಿ ಒಟ್ಟು 63 ವಿದ್ಯಾರ್ಥಿಗಳು ಒಟ್ಟು 120 ವಿದ್ಯಾರ್ಥಿಗಳು ಪರೀಕ್ಷಾ ಶಿಬಿರದಲ್ಲಿ ಭಾಗವಹಿಸಿದರು.

* ಮಾರ್ಚ್ 30 ರಂದು ಬಂಟರ ಸಭಾಭವನ, ಪುತ್ತೂರಿನಲ್ಲಿ 2022–23ನೇ ಸಾಲಿನ ಜಿಲ್ಲಾ ಮಟ್ಟದ ತೃತೀಯ ಚರಣ ಕಬ್ ಮತ್ತು ಸುವರ್ಣ ಗರಿ ಬುಲ್ಬುಲ್ ಪರೀಕ್ಷಾ ಶಿಬಿರದ ಮೂರನೇ ಹಂತದ ಪರೀಕ್ಷೆಯು ಬಹಳ ಯಶಸ್ವಿಯಾಗಿ ನಡೆಯಿತು. ಕಬ್ ವಿಭಾಗದ ನಾಯಕಿಯಾಗಿ ಶ್ರೀಮತಿ ರೇಖಾ (ಕಬ್) ಹಾಗೂ ಬುಲ್ಬುಲ್ ವಿಭಾಗದಲ್ಲಿ ಶ್ರೀಮತಿ ಅನಿತಾ ಕೆ (ಹೆಚ್ಚಬ್ಲೂಬಿ) ಫ್ಲಾ)ರವರು ನಾಯಕರಾಗಿ ಸಹಕರಿಸಿದರು. ಕಬ್ ವಿಭಾಗದಲ್ಲಿ ಒಟ್ಟು 98 ವಿದ್ಯಾರ್ಥಿಗಳು ಹಾಗೂ ಬುಲ್‌ಬುಲ್ ವಿಭಾಗದಲ್ಲಿ ಒಟ್ಟು 61 ವಿದ್ಯಾರ್ಥಿಗಳು ಒಟ್ಟು 159 ವಿದ್ಯಾರ್ಥಿಗಳು ಪರೀಕ್ಷಾ ಶಿಬಿರದಲ್ಲಿ ಭಾಗವಹಿಸಿದರು.

* ಏಪ್ರಿಲ್ 03 ರಂದು ಸ್ಕೌಟ್ಸ್ ಮತ್ತು ಗೈಡ್ಸ್ ಭವನ, ಲಾಲ್‌ಬಾಗ್, ಮಂಗಳೂರಿನಲ್ಲಿ 2022–23ನೇ ಸಾಲಿನ ಜಿಲ್ಲಾ ಮಟ್ಟದ ತೃತೀಯ ಚರಣ ಕಬ್ ಮತ್ತು ಸುವರ್ಣ ಗರಿ ಬುಲ್ಬುಲ್ ಪರೀಕ್ಷಾ ಶಿಬಿರದ ನಾಲ್ಕನೇ ಹಂತದ ಪರೀಕ್ಷೆಯು ಬಹಳ ಯಶಸ್ವಿಯಾಗಿ ನಡೆಯಿತು. ಕಬ್ ವಿಭಾಗದ ನಾಯಕಿಯಾಗಿ ಶ್ರೀಮತಿ ಲಕ್ಷ್ಮಿ ಹೆಚ್ಚಬ್ಲೂಬಿ (ಕಬ್) ಹಾಗೂ ಬುಲ್ಬುಲ್ ವಿಭಾಗದಲ್ಲಿ ಶ್ರೀಮತಿ ಮೋಹಿನಿ ರಾಮಚಂದ್ರ ಪ್ರಿ–ಎ.ಎಲ್.ಟಿ (ಫ್ಲಾ) ರವರು ನಾಯಕರಾಗಿ ಸಹಕರಿಸಿದರು. ಕಬ್ ವಿಭಾಗದಲ್ಲಿ ಒಟ್ಟು 38 ವಿದ್ಯಾರ್ಥಿಗಳು ಹಾಗೂ ಬುಲ್ಬುಲ್ ವಿಭಾಗದಲ್ಲಿ ಒಟ್ಟು 72 ವಿದ್ಯಾರ್ಥಿಗಳು ಒಟ್ಟು 110 ವಿದ್ಯಾರ್ಥಿಗಳು ಪರೀಕ್ಷಾ ಶಿಬಿರದಲ್ಲಿ ಭಾಗವಹಿಸಿದರು.

* ಏಪ್ರಿಲ್ 11 ರಂದು ಮಂಗಳೂರು ವಿಶ್ವವಿದ್ಯಾಲಯ ಕೋಣಾಜೆ ಮಂಗಳೂರಿನಲ್ಲಿ ರೋವರ್ಸ್ ಮತ್ತು ರೇಂಜರ್ಸ್ ಮೌಲ್ಯಾಧಾರಿತ ಕೋರ್ಸಿನ ಪಠ್ಯಕ್ರಮ ರಚನಾ ಸಮಿತಿಯ ಸಭೆ ನಡೆಯಿತು. ಸಮಿತಿ ಅಧ್ಯಕ್ಷರು ಡಾ. ಜೆರಾಲ್ಡ್ ಸಂತೋಷ್ ಡಿ. ಸೋಜ, ಸಮಿತಿ ಸದಸ್ಯರಾದ ಡಾ. ಸಿದ್ದರಾಜ್ ಎಮ್ ಎನ್, ಶ್ರೀ ಅನಿಲ್ ಕುಮಾರ್, ಶ್ರೀ ಪ್ರತಿಮ್ ಕುಮಾರ್ ಕೆ.ಎಸ್, ಶ್ರೀಮತಿ ಸುಮನ ಶೇಖರ್, ಶ್ರೀ ಕೆ. ಭರತ್‌ರಾಜ್ ಸಭೆಯಲ್ಲಿ ಉಪಸ್ಥಿತರಿದ್ದರು.

* ಏಪ್ರಿಲ್ 08 ರಿಂದ 14ರ ವರೆಗೆ ಜಿಲ್ಲಾ ತರಬೇತಿ ಕೇಂದ್ರ, ಪಿಲಿಕುಳ ಮಂಗಳೂರಿನಲ್ಲಿ ಕಬ್ ಮಾಸ್ಟರ್, ಫ್ಲಾಕ್ ಲೀಡರ್, ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್ಗಳ ಮುಂದುವರಿದ ತರಬೇತಿ ಶಿಬಿರವು ನಡೆಯಿತು. ಶಿಬಿರವನ್ನು ಗುರುಪುರ ಸ್ಥಳೀಯ ಸಂಸ್ಥೆಯ ದಾನಿಗಳಾದ ಶ್ರೀ ಸುನೀಲ್‌ರವರು ದೀಪ ಬೆಳಗಿಸಿ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಜಿಲ್ಲಾ ಕಾರ್ಯದರ್ಶಿ ಎಂ.ಜಿ.ಕಜೆರವರು ವಹಿಸಿದ್ದರು. ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀಮತಿ ಜಯವಂತಿ ಸೋನ್ಸವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕಬ್ ವಿಭಾಗದ ನಾಯಕರಾಗಿ ಶ್ರೀ ನಾರಾಯಣ ಸ್ವಾಮಿ (ಎಲ್.ಟಿ), ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಗುರುಮೂರ್ತಿ (ಎಲ್.ಟಿ), ಫ್ಲಾಕ್ ವಿಭಾಗದ ನಾಯಕಿಯಾಗಿ ಸಿಸ್ಟರ್ ಲೊರಿನಾ (ಎಲ್.ಟಿ), ಗೈಡ್ ವಿಭಾಗದ ನಾಯಕಿಯಾಗಿ ಶ್ರೀಮತಿ ಪ್ರೇಮ (ಎಎಲ್‌ಟಿ), ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀಮತಿ ಜಯಶ್ರೀ (ಎಲ್‌ಟಿ) ಸ್ವಾಗತಿಸಿದರು. ಶ್ರೀಮತಿ ಮೋಹಿನಿ (ಪ್ರಿ.ಎ.ಎಲ್.ಟಿ) ವಂದಿಸಿದರು. ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್., (ಎಲ್.ಟಿ) ಕಾರ್ಯಕ್ರಮ ನಿರೂಪಿಸಿದರು. ಶಿಬಿರದಲ್ಲಿ ಕಬ್ ವಿಭಾಗದಲ್ಲಿ 12, ಬುಲ್‌ಬುಲ್ ವಿಭಾಗದಲ್ಲಿ 11, ಸ್ಕೌಟ್ ವಿಭಾಗದಲ್ಲಿ 15, ಗೈಡ್ ವಿಭಾಗದಲ್ಲಿ 17 ಒಟ್ಟು 55 ಶಿಬಿರಾರ್ಥಿಗಳು ಮುಂದುವರಿದ ತರಬೇತಿ ಶಿಬಿರದಲ್ಲಿ ಭಾಗವಹಿಸಿರುತ್ತಾರೆ.

ತರಬೇತಿ ಶಿಬಿರದ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಡಾ.ಎಂ. ಮೋಹನ್ ಆಳ್ವರವರು ಶಿಬಿರಾಗ್ನಿ ಕಾರ್ಯಕ್ರಮವನ್ನು ಉದ್ಘಾಟಿಸಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಕೊಡಗು ಜಿಲ್ಲೆಯ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಜಿಮ್ಮಿ ಸಿಕ್ವೇರಾ, ಜಿಲ್ಲಾ ಸಹಾಯಕ ಆಯುಕ್ತರಾದ ಶ್ರೀ ನವೀನ್ ಚಂದ್ರ ಅಂಬೂರಿ, ಉಪಸ್ಥಿತರಿದ್ದರು.

ರಾಜ್ಯ ಸಂಘಟನಾ ಆಯುಕ್ತರಾದ ಎಂ. ಪ್ರಭಾಕರ್ ಭಟ್‌ರವರು ತರಬೇತಿ ಕೇಂದ್ರಕ್ಕೆ ಭೇಟಿ ನೀಡಿ ಶುಭ ಹಾರೈಸಿದರು. ಏಪ್ರಿಲ್ 13 ರಂದು ಮುಂದುವರಿದ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಜಿಲ್ಲಾ ಸಹ ಕಾರ್ಯದರ್ಶಿ ಶ್ರೀ ವಸಂತ್ ದೇವಾಡಿಗ

ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡು ಸಮಾರೋಪ ಭಾಷಣವನ್ನು ಮಾಡಿದರು. ಜಿಲ್ಲಾ ಸಹಾಯಕ ಆಯುಕ್ತರಾದ ಶ್ರೀ ಶ್ರೀನಿವಾಸ ಕಿಣಿ ಮುಖ್ಯ ಅತಿಥಿಯಾಗಿ ಭಾಗವಹಿಸಿದರು. ವೇದಿಕೆಯಲ್ಲಿ ಸ್ಕೌಟ್–ಗೈಡ್ ತರಬೇತಿ ಆಯುಕ್ತರು, ಶಿಬಿರ ನಾಯಕರು, ಸಹಾಯಕರು ಉಪಸ್ಥಿತರಿದ್ದರು.









## ಹಾಸನ

ಮಗು ತಾಯಿಯ ಹೊಟ್ಟೆಯಲ್ಲಿರುವಾಗಲೇ ಕಾನೂನುಗಳು ಅನ್ವಯವಾಗುತ್ತವೆಯೆಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಬಿ.ಕೆ. ರವಿಕಾಂತರವರು ಅಭಿಪ್ರಾಯಪಟ್ಟರು. ಅವರು ಜಿಲ್ಲಾ ಸಂಸ್ಥೆ ಹಾಗೂ ತಾಲ್ಲೂಕು ಸ್ಥಳೀಯ ಸಂಸ್ಥೆಯ ವತಿಯಿಂದ ಏಪ್ರಿಲ್ 11 ರಿಂದ ಜಿಲ್ಲಾ ಸ್ಕೌಟ್ ಭವನದಲ್ಲಿ ಆಯೋಜಿಸಿದ್ದ ಉಚಿತ ಬೇಸಿಗೆ ಶಿಬಿರದ ಉದ್ಘಾಟನೆಯನ್ನು ನೇರವೇರಿಸಿ ಮಾತನಾಡಿದರು. ಜಿಲ್ಲಾ ಮುಖ್ಯ ಆಯುಕ್ತರಾದ ಡಾ|| ವೈ.ಎಸ್. ವೀರಭದ್ರಪ್ಪನವರು ಅಧ್ಯಕ್ಷತೆ ವಹಿಸಿ ಮಕ್ಕಳ ಬೇಸಿಗೆ ಶಿಬಿರಕ್ಕೆ ಶುಭ ಹಾರೈಸಿದರು. ಶಿಬಿರದಲ್ಲಿ ಮಕ್ಕಳಿಗೆ ಆಂಗ್ಲ ಭಾಷಾ ಬಳಕೆಯ ಕೌಶಲ್ಯಗಳನ್ನು ಶಿಕ್ಷಕರಾದ ಶ್ರೀ ಚಿದಾನಂದ್‌ರವರು ತಿಳಿಸಿದರು. ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿರವರು ಸ್ಕೌಟಿಂಗ್ ಮತ್ತು ಗೈಡಿಂಗ್ ಮಾಹಿತಿ ತಿಳಿಸುವುದರೊಂದಿಗೆ ಸರ್ವರನ್ನು ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ಎಂ.ಬಿ. ಗಿರಿಜಾಂಭಿಕ ಹಾಗೂ ಇತರರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಎ.ಎಸ್.ಓ.ಸಿ. ಕು|| ಪ್ರಿಯಾಂಕರವರು ಸಂಘಟಿಸಿದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀಮತಿ ವನಜಾಕ್ಷಿ ಬಿ.ಎಸ್.ರವರು ನಿರೂಪಿಸಿ ಸರ್ವರನ್ನೂ ವಂದಿಸಿದರು. 50ಕ್ಕೂ ಹೆಚ್ಚು ವಿದ್ಯಾಥಿಗಳು ಉಚಿತ ಬೇಸಿಗೆ ಶಿಬಿರದ ಪ್ರಯೋಜನವನ್ನು ಪಡೆದುಕೊಂಡರು.



* ಮಾರ್ಚ್ 28 ರಿಂದ 31ರ ವರೆಗೆ ಸನ್ ಬ್ರೈಟ್ ಶಾಲೆಯ ಕಬ್–ಬುಲ್‌ಬುಲ್ ಮಕ್ಕಳಿಗೆ ಬೇಸಿಗೆ ಶಿಬಿರ ನಡೆಸಲಾಯಿತು. ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಕಬ್ ಮಾಸ್ಟರ್ ಶ್ರೀ ಚೇತನ್ ರವರು ಮತ್ತು ಫ್ಲಾಕ್ ಲೀಡರ್ ಶ್ರೀಮತಿ ಗೌರಿರವರುಗಳ ಮಾರ್ಗದರ್ಶನದಲ್ಲಿ ಬೇಸಿಗೆ ಶಿಬಿರವನ್ನು ಉದ್ಘಾಟಿಸಿ ಮಕ್ಕಳಿಗೆ ಚಟುವಟಿಕೆಯನ್ನು ಪ್ರಾರಂಭಿಸಿರುತ್ತಾರೆ. ಶಿಬಿರದಲ್ಲಿ 55 ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.



* ಮಾರ್ಚ್ 28 ರಿಂದ ಏಪ್ರಿಲ್ 01ರ ವರೆಗೆ ಸಂತ ಫಿಲೋಮಿನ ಹಿರಿಯ ಪ್ರಾಥಮಿಕ ಶಾಲೆ ಹಾಸನ ತಾಲ್ಲೂಕಿನ ಬುಲ್‌ಬುಲ್ ಮತ್ತು ಗೈಡ್ ವಿದ್ಯಾರ್ಥಿಗಳಿಗೆ ಬೇಲೂರು ತಾಲ್ಲೂಕಿನಲ್ಲಿ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ನಾಲ್ಕು ಘಟಕಗಳಿಂದ 120 ವಿದ್ಯಾರ್ಥಿಗಳು ಬೇಸಿಗೆ ಶಿಬಿರದಲ್ಲಿ ಭಾಗವಹಿಸಿದ್ದಾರೆ.

* ಏಪ್ರಿಲ್ 01 ರಿಂದ 03ರ ವರೆಗೆ ಸರ್ಕಾರಿ ಪ್ರೌಢ ಶಾಲೆ ವಿದ್ಯಾನಗರ ಇಲ್ಲಿ ಹಾಸನ ತಾಲ್ಲೂಕಿನ ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಲಾಯಿತು. ಶಿಬಿರದ ಉಸ್ತುವಾರಿಯವನ್ನು ಗೈಡ್ ಶಿಕ್ಷಕಿ ಶ್ರೀಮತಿ ಬಿ.ಎಸ್. ವನಜಾಕ್ಷಿರವರು ವಹಿಸಿಕೊಂಡಿರುತ್ತಾರೆ. ಶಿಬಿರದಲ್ಲಿ 80ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.

* ಹರಿಹರಪುರ ಹಾಸನ ತಾಲ್ಲೂಕಿನ ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಲಾಯಿತು. ಶಿಬಿರದ ಉಸ್ತುವರಿಯನ್ನು ಗೈಡ್ ಶಿಕ್ಷಕಿ ಶ್ರೀಮತಿ ಉಮ್ಮೇಸಲ್ಮಾರವರು ವಹಿಸಿಕೊಂಡಿರುತ್ತಾರೆ. ಶಿಬಿರದಲ್ಲಿ 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.



* ಮಾರ್ಚ್ 28 ರಿಂದ ಏಪ್ರಿಲ್ 08ರ ವರೆಗೆ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರೌಢ ಶಾಲಾ ವಿಭಾಗದುದ್ದ ಇಲ್ಲಿ ಹಾಸನ ತಾಲ್ಲೂಕಿನ ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಲಾಯಿತು. ಶಿಬಿರದ ಉಸ್ತುವರಿಯನ್ನು ಸ್ಕೌಟ್ ಮಾಸ್ಟರ್ ಶ್ರೀ ಎಂ.ಎಸ್. ಪ್ರಕಾಶ್‌ರವರು ವಹಿಸಿಕೊಂಡಿರುತ್ತಾರೆ. ಶಿಬಿರದಲ್ಲಿ 95ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.

* ಮಾರ್ಚ್ 03 ರಿಂದ 06ರ ವರೆಗೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಉತ್ತರ ಬಡಾವಣೆ ಇಲ್ಲಿ ತಾಲ್ಲೂಕಿನ ಸ್ಕೌಟ್ಸ್–ಗೈಡ್ಸ್‌ಗಳಿಗೆ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಲಾಯಿತು. ಶಿಬಿರದ ಉಸ್ತುವರಿಯನ್ನು ಶ್ರೀಮತಿ ವೈ.ಡಿ. ಪದ್ಮ, ಗೈಡ್ ಶಿಕ್ಷಕಿರವರು ವಹಿಸಿದ್ದಕೊಂಡಿದ್ದರು. ಶಿಬಿರದಲ್ಲಿ 112ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಬೇಲೂರು ತಾಲ್ಲೂಕಿನ ಸ್ಕೌಟ್ಸ್–ಗೈಡ್ಸ್, ಕಬ್, ಬುಲ್‌ಬುಲ್ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಲಾಯಿತು. ಶಿಬಿರದಲ್ಲಿ ವಿದ್ಯಾರ್ಥಿಗಳಿಗೆ ಸ್ಕೌಟಿಂಗ್–ಗೈಡಿಂಗ್ ಬಗ್ಗೆ ಮಾಹತಿಯನ್ನು ನೀಡಲಾಯಿತು. ಶಿಬಿರದ ಉಸ್ತುವರಿಯನ್ನು ಗೈಡ್ ಶಿಕ್ಷಕಿ ಶ್ರೀಮತಿ ವಾಣಿಯವರು ವಹಿಸಿಕೊಂಡಿರುತ್ತಾರೆ. ಶಿಬಿರದಲ್ಲಿ 80ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.

* ಏಪ್ರಿಲ್ 03 ರಿಂದ 06ರ ವರಗೆ ಶ್ರೀನಿಧಿ ಆಂಗ್ಲ ಮಾಧ್ಯಮ ಶಾಲೆ ಜಾವಗಲ್ ಅರಸೀಕೆರೆ ತಾಲ್ಲೂಕಿನ ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರಕ್ಕೆ ಶಾಲಾ ಕಾರ್ಯದರ್ಶಿಗಳಾದ ಶ್ರೀ ಸುರೇಶ್‌ರವರು ಚಾಲನೆ ನೀಡಿರುತ್ತಾರೆ. ಶಾಲಾ ಹಿರಿಯ ಮುಖಂಡರು ಗಿಡಕ್ಕೆ ನೀರು ಹಾಕುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಶುಭ ಹಾರೈಸಿದರು. ಬೇಸಿಗೆ ಶಿಬಿರದ ಉಸ್ತುವಾರಿಯನ್ನು ಶ್ರೀಮತಿ ಲತಾ ಗೈಡ್ ಕ್ಯಾಪ್ಟನ್‌ರವರು ವಹಿಸಿಕೊಟ್ಟಿರುತ್ತಾರೆ. ಮುಖ್ಯೋಪಾಧ್ಯಾಯರಾದ ಶ್ರೀಮತಿ ಮಮತಾರವರು ಸಂಪೂರ್ಣ ಸಹಕಾರ ನೀಡುವುದರೊಂದಿಗೆ ಮಕ್ಕಳಿಗೆ ಕರಕುಶಲದ ಬಗ್ಗೆ ತರಬೇತಿ ನೀಡಿದ್ದಾರೆ.



* ಸರ್ಕಾರಿ ಪ್ರೌಢಶಾಲೆ ಮುರುಂಡಿ, ಅರಸೀಕೆರೆ ಇಲ್ಲಿನ ಪ್ರೇರಣಾ ಗೈಡ್ಸ್ ಘಟಕದ ವತಿಯಿಂದ ಏಪ್ರಿಲ್ 03 ರಿಂದ 06ರ ವರೆಗೆ ಬೇಸಿಗೆ ಶಿಬಿರಕ್ಕೆ ಚಾಲನೆ ನೀಡಲಾಯಿತು. ಮುಖ್ಯೋಪಾಧ್ಯಾಯರಾದ ಶ್ರೀಯುತ ಕೆ.ಸಿ. ನಟರಾಜ್‌ರವರು ಗಿಡಕ್ಕೆ ನೀರೆರೆಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಇನ್ನಿತರ ಕಾರ್ಯಕ್ರಮಕ್ಕೆ ಸಹಕಾರ ನೀಡುವುದಾಗಿ ತಿಳಿಸಿ ಶುಭ ಹಾರೈಸಿದರು. ಗೈಡ್ ಕ್ಯಾಪ್ಟನ್ ಶ್ರೀಮತಿ ಕಾತ್ಯಾಯಿನಿಯವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಯಮ, ಸೃಜನಶೀಲತೆ, ಮೌಲ್ಯಗಳನ್ನು ಬಿತ್ತುವಲ್ಲಿ ಈ ಬೇಸಿಗೆ ಶಿಬಿರವು ಮಹತ್ವದ ಪಾತ್ರ ವಹಿಸುತ್ತಿರುವುದಾಗಿ ತಿಳಿಸಿದರು. ಸುಮಾರು 70–80 ಮಕ್ಕಳು ಶಿಬಿರದ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದಾರೆ.

* ಅರಸೀಕೆರೆ ತಾಲ್ಲೂಕು ಸರ್ಕಾರಿ ಪದವಿಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗ ಸಂತೆ ಮೈದಾನ ಗಂಡಸಿಯಲ್ಲಿ ಸ್ಕೌಟ್–ಗೈಡ್ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರವನ್ನು ನಡೆಸಲಾಯಿತು. ಬೇಸಿಗೆ ಶಿಬಿರದ ಅಧ್ಯಕ್ಷತೆಯನ್ನು ಡಾ|| ವೈ.ಎಸ್. ವೀರಭದ್ರಪ್ಪರವರು ವಹಿಸಿಕೊಂಡಿದ್ದರು. ಗಿಡಕ್ಕೆ ನೀರು ಹಾಕುವುದರ ಮೂಲಕ ಕಾರ್ಯಕ್ರಮಕ್ಕೆ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿರವರು ಚಾಲನೆಯನ್ನು ನೀಡಿದರು. ಶ್ರೀಮತಿ ಕಾಮೇಶ್ವರಿ ಭಟ್ ಜಿಲ್ಲಾ ತರಬೇತಿ ಆಯುಕ್ತರು ಹಾಗೂ ಗೈಡ್ ಶಿಕ್ಷಕಿ ಇವರು ವಹಿಸಿಕೊಂಡಿದ್ದಾರೆ.

* ಏಪ್ರಿಲ್ 05 ರಿಂದ 07ರ ವರೆಗೆ ಸರ್ಕಾರಿ ಪ್ರೌಢ ಶಾಲೆ, ಬಚ್ಚೆನಹಳ್ಳಿ ಅರಸೀಕೆರೆ ತಾಲ್ಲೂಕಿನ ಸ್ಕೌಟ್ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಿ ವಿಭಿನ್ನ ರೀತಿಯ ಚಟುವಟಿಕೆಗಳನ್ನು ಮಾಡಿಸುವುರದ ಮೂಲಕ ಬೇಸಿಗೆ ಶಿಬಿರವನ್ನು ಯಶಸ್ವಿಗೊಳಿಸಿರುತ್ತಾರೆ. ಶಿಬಿರಾದ ನಾಯಕರಾಗಿ ಸ್ಕೌಟ್ ಮಾಸ್ಟರ್ ಶ್ರೀ ಅಂಜನಪ್ಪರವರು ವಹಿಸಿಕೊಂಡಿರುತ್ತಾರೆ.

* ಸರ್ಕಾರಿ ಪ್ರೌಢ ಶಾಲೆ, ಗಂಡಸಿ, ಅರಸೀಕೆರೆ ತಾಲ್ಲೂಕಿನ ಗೈಡ್ಸ್ ವಿದ್ಯಾರ್ಥಿಗಳಿಗೆ ಏಪ್ರಿಲ್ 05 ರಿಂದ 08ರ ವರೆಗೆ ಬೇಸಿಗೆ ಶಿಬಿರವನ್ನು ಮಾಡಿರುತ್ತಾರೆ. ಶಿಬಿರದ ಉಸ್ತುವರಿಯನ್ನು ಗೈಡ್ ಶಿಕ್ಷಕಿ ಶ್ರೀಮತಿ ಚಂಪಾರಾಣಿರವರು ವಹಿಸಿಕೊಂಡಿರುತ್ತಾರೆ.

* ಆಲೂರು ತಾಲ್ಲೂಕು ಸಂಸ್ಥೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬೈರಾಪುರದಲ್ಲಿ ಏಪ್ರಿಲ್ 03 ರಿಂದ 05ರ ವರೆಗೆ ಬುಲ್‌ಬುಲ್ಸ್ ಮಕ್ಕಳಿಗೆ ಹಾಗೂ ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರವನ್ನು ನಡೆಸಿರುತ್ತಾರೆ. ಶಿಬಿರದ ಉಸ್ತುವಾರಿಯನ್ನು ಶ್ರೀಮತಿ ಎಲಿಜಬೆತ್ ಎಂ.ಎಲ್. ಗೈಡ್ ಶಿಕ್ಷಕಿ ಇವರು ವಹಿಸಿಕೊಂಡು ಮಕ್ಕಳಿಗೆ ಕ್ಯಾಫ್ಟ್ ಹಾಗೂ ಬುಲ್‌ಬುಲ್ಸ್ ಮಕ್ಕಳಿಗೆ ಕರಕುಶಲ ಚಿತ್ರಕಲೆ, ಅಭಿನಯ ಗೀತೆ, ಬುಲ್‌ಬುಲ್ ವಿಷಯಗಳನ್ನು ತಿಳಿಸಿರುತ್ತಾರೆ.

* ಏಪ್ರಿಲ್ 3 ರಿಂದ 9ರ ವರೆಗೆ ರೋಟರಿ ಆಂಗ್ಲಾ ಮಾಧ್ಯಮ ಶಾಲೆಯಲ್ಲಿ ಬೇಸಿಗೆ ಶಿಬಿರವನ್ನು ಮಾಡಿರುತ್ತಾರೆ

* ಸಕಲೇಶಪುರ ತಾಲ್ಲೂಕಿನ ಸಂಸ್ಥೆಯ ವತಿಯಿಂದ ಏಪ್ರಿಲ್ 3 ರಿಂದ 6ರ ವರೆಗೆ ಜೆ.ಎಸ್.ಎಸ್. ಶಾಲೆ ಬಾಗೆ ಸಕಲೇಪುರ ತಾಲ್ಲೂಕಿನ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರವನ್ನು ಶಾಲೆಯಲ್ಲಿ ಮಾಡಿರುತ್ತಾರೆ.

* ಜಿಲ್ಲಾ ಸಂಸ್ಥೆ ಹಾಸನ ಕಿತ್ತೂರು ರಾಣಿಚೆನ್ನಮ್ಮ ಗೈಡ್ ಕಂಪನಿ. ಕಬ್ಬಳಗೆರೆ, ಅರಕಲಗೂಡು ತಾಲ್ಲೂಕು. ಹಾಸನ ಜಿಲ್ಲೆ ಇಲ್ಲಿ ಬೇಸಿಗೆ ಶಿಬಿರವನ್ನು ಹಮ್ಮಿಕೊಂಡಿದ್ದು, ಮಕ್ಕಳಿಗೆ ಪ್ರಥಮ ಚಿಕಿತ್ಸೆಯ ಬಗ್ಗೆ ತಿಳಿಸಲಾಯಿತು.

## ಹಾವೇರಿ

ಏಪ್ರಿಲ್ 11 ರಿಂದ 13ರ ವರೆಗೆ ಜೆ.ಪಿ. ರೋಟರಿ ಪ್ರಾಥಮಿಕ ಶಾಲೆ ರಾಜೇಂದ್ರ ನಗರ ಹಾವೇರಿಯಲ್ಲಿ ತೃತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಸಂಘಟನೆ ಮಾಡಲಾಯಿತು. ಜಿಲ್ಲೆಯ ವಿವಿಧ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಂದ 187 ಸ್ಕೌಟ್ಸ್ ಮಕ್ಕಳು 177 ಗೈಡ್ಸ್ ಮಕ್ಕಳು ಭಾಗವಹಿಸಿದ್ದರು. ನಾಯಕರಾಗಿ ಸ್ಕೌಟ್ ವಿಭಾಗಕ್ಕೆ ಶ್ರೀ ಡಿ.ಎಸ್. ವಡಕಣ್ಣನವರ, ಗೈಡ್ ವಿಭಾಗಕ್ಕೆ ಶ್ರೀಮತಿ ಅನ್ನಪೂರ್ಣ ಕಟಗಿ ವಹಿಸಿದ್ದರು. ಶಿಬಿರಕ್ಕೆ ಶ್ರೀ ಆರ್.ಆರ್. ಕಾಶಪ್ಪನವರ, ಜಿಲ್ಲಾ ಕಾರ್ಯದರ್ಶಿ, ಶ್ರೀ ಜಿ.ವಿ. ಶಿಹಿರೇಗೌಡ್ರ ಜಿಲ್ಲಾ ಸ್ಥಾನಿಕ ಆಯುಕ್ತರು ಶ್ರೀಮತಿ ನಂದಿನಿ ವಿರುಪಣ್ಣನವರ ಜಿಲ್ಲಾ ಗೈಡ್ಸ್ ಆಯುಕ್ತರು ಭೇಟಿನೀಡಿದರು. ಜಿಲ್ಲೆಯಲ್ಲಿ ಹಾವೇರಿ, ಬ್ಯಾಡಗಿ, ರಾಣೆಬೆನ್ನೂರ, ಶಿಗ್ಗಾಂವ, ಸವಣೂರ, ಹಿರೆಕೆರೂರ, ಹಾನಗಲ್ಲ ತಾಲ್ಲೂಕುಗಳಲ್ಲಿ ನಿರಂತರವಾಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಬೇಸಿಗೆ ಶಿಬಿರ ನಡೆಯುತ್ತಿವೆ.



## ಕಲಬುರಗಿ

ಸರ್ಕಾರಿ ಪ್ರೌಢಶಾಲೆ, ಆಡಕಿಯಲ್ಲಿ ಸಮಾಜ ವಿಜ್ಞಾನ ಶಿಕ್ಷಕಿಯಾಗಿ ಮತ್ತು ಹಿಮಾಲಯ ವೃಕ್ಷಮಣಿ ತರಬೇತಿ ಮುಗಿಸಿ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡ ಶ್ರೀಮತಿ ಚಂದ್ರಕಲಾ ಎಂ. ಪಾಟೀಲ್, ಧಾರವಾಡ ಇವರು ವಿಜಯಪುರ ಜಿಲ್ಲೆಯಲ್ಲಿ ಜ್ಞಾನಯೋಗಾಶ್ರಮ, ವಿಜಯಪುರ ಮತ್ತು ಉನ್ನತಿ ಫೌಂಡೇಶನ್, ಧಾರವಾಡ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿ ಶತಮಾನದ ಸಂತ ಪರಮಪೂಜ್ಯ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳ ಆದರ್ಶ ಜೀವನದ ಕುರಿತು ಏಪ್ರಿಲ್ 19 ರಂದು 500 ಕವಿಗಳಿಂದ ಏಕಕಾದಲ್ಲಿ 20 ನಿಮಿಷ 23 ಸೆಕೆಂಡ್‌ಗಳಲ್ಲಿ ಕಾವ್ಯ ರಚನೆ ಮಾಡುವ ಮೂಲಕ "ಕನ್ನಡ ಪುಸ್ತಕ ದಾಖಲೆ"ಯನ್ನು ನಿರ್ಮಿಸಿದರು.



* ಏಪ್ರಿಲ್ 24ರಂದು ಕಲಬುರಗಿ ಆಕಾಶವಾಣಿ ವತಿಯಿಂದ ನಡೆದ "ಬಾಲಲೋಕ ಕಾರ್ಯಕ್ರಮ"ದಲ್ಲಿ ಅಫಜಲ್‌ಪುರ ಸ್ಥಳೀಯ ಸಂಸ್ಥೆಯ ರಾಜೇಶ್ವರಿ ಸಿಮೆಂಟ್ ಪ್ಯಾಕ್ಟರಿಯ ಹವಳಗಾ ಶಾಲೆಯ ಸ್ಕೌಟ್ಸ್–ಗೈಡ್ಸ್‌ಗಳು ಮತ್ತು ಸ್ಕೌಟ್ ಮಾಸ್ಟರ್ ಶ್ರೀ ವಸೀಂ, ಗೈಡ್ ಕ್ಯಾಪ್ಟನ್ ಶ್ರೀಮತಿ ಸ್ವಪ್ನ, ತಾಲ್ಲೂಕು ಕಾರ್ಯದರ್ಶಿ ಶ್ರೀ ಸೀಲಸಿದ್ದ, ಗೈಡ್ ಕ್ಯಾಪ್ಟನ್ ಶ್ರೀಮತಿ ಚಂದ್ರಕಲಾ ಎಂ. ಪಾಟೀಲ ಹಾಗೂ ಶ್ರೀ ಸದಾನಂದ ಪೆರ್ಲ್‌ ರವರು ಭಾಗವಹಿಸಿದ್ದರು.



## ಕೋಲಾರ

ಮಾರ್ಚ್ 22 ರಂದು ಕೋಲಾರ ಜಿಲ್ಲಾಡಳಿತ, ಡಿ.ಎಂ.ಆರ್. ಪತ್ರಕರ್ತರ ಸಂಘ, ವತಿಯಿಂದ ಆಯೋಜಿಸಲಾಗಿದ್ದ ಕೋಲಾರ ಯುಗಾದಿ ಉತ್ಸವದಲ್ಲಿ ಸಾರ್ವಜನಿಕರಿಗೆ ಮತ್ತು ಗಣ್ಯರಿಗೆ ಬೇವು-ಬೆಲ್ಲ ವಿತರಿಸಲಾಯಿತು. ಮತ್ತು ಕಾರ್ಯಕ್ರಮದಲ್ಲಿ ಸೇವೆ ಸಲ್ಲಿಸಲಾಯಿತು. ಈ ಸೇವಾ ಶಿಬಿರದಲ್ಲಿ ಜಿಲ್ಲಾ ಆಯುಕ್ತ ಶ್ರೀ ಕೆ.ಆರ್. ಸುರೇಶ್, ಜಂಟಿ ಕಾರ್ಯದರ್ಶಿ ಶ್ರೀಮತಿ ಎನ್. ಉಮಾದೇವಿ, ಜಿಲ್ಲಾ ಕಾರ್ಯದರ್ಶಿ ಶ್ರೀ ಎಂ.ವಿ. ನಾರಾಯಣಸ್ವಾಮಿ, ಸಹ ಕಾರ್ಯದರ್ಶಿ ಶ್ರೀ ವಿ. ಬಾಬು, ಶ್ರೀ ವಿಠಲ್ ರಾವ್ ಹಾಗೂ ಸುಮಾರು 80 ಸ್ಕೌಟ್ಸ್-ಗೈಡ್ಸ್ ರೋವರ್ಸ್-ರೇಂಜರ್ಸ್ ಭಾಗವಹಿಸಿದ್ದರು. ಎ.ಪಿ.ಎಂ.ಸಿ. ಪುಟ್ಟರಾಜು ಹಾಗೂ ಜಿಲ್ಲಾ ಸಂಘಟಕ ಶ್ರೀ ವಿಶ್ವನಾಥ ವಿ. ಕಾರ್ಯಕ್ರಮದ ನಿರ್ವಹಣೆ ಮಾಡಿದರು.



* ಮಾರ್ಚ್ 25 ರಂದು ಅರ್ಥ್ ಅವರ್ ಕಾರ್ಯಕ್ರಮವನ್ನು ವಿದ್ಯಾರ್ಥಿಗಳು, ಶಿಕ್ಷಕರು, ಪದಾಧಿಕಾರಿಗಳು ತಮ್ಮ ಮನೆಗಳಲ್ಲಿ ಆಚರಿಸಲಾಯಿತು.

* ಮಾರ್ಚ್ 25 ರಿಂದ 19ರ ವರಿಗೆ ದಳ ಮಟ್ಟದಲ್ಲಿ ಸುಮಾರು 1,886 ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಬೇಸಿಗೆ ಶಿಬಿರದಲ್ಲಿ ಭಾಗವಹಿಸಿದ್ದರು. ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್), ಶ್ರೀ ರಾಧ ವೆಂಕಟೇಶ್, ರಾಜ್ಯ ಸಹಾಯಕ ಆಯುಕ್ತರು (ಗೈಡ್), ಶ್ರೀಮತಿ ಕೆ.ವಿ. ಶ್ಯಾಮಲ, ರಾಜ್ಯ ತರಬೇತಿ ಆಯುಕ್ತರು ಮತ್ತು ಕೋಲಾರ ಜಿಲ್ಲಾ ಉಸ್ತುವಾರಿಗಳು ವಿವಿಧ ಶಾಲೆಗಳ ಬೇಸಿಗೆ ಶಿಬಿರಗಳಿಗೆ ಭೇಟಿ ಮಾಡಿ ವಿದ್ಯಾರ್ಥಿಗಳು ಮತ್ತು ದಳ ನಾಯಕರ ಜೊತೆ ಸಂವಾದ ನಡೆಸಿ ಮಾರ್ಗದರ್ಶನ ನೀಡಿದರು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರ ನೇತೃತ್ವದಲ್ಲಿ ಜಿಲ್ಲಾ, ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಭೇಟಿ ನೀಡಿದರು.



* ಏಪ್ರಿಲ್ 04 ರಂದು ಜಿಲ್ಲಾ ಮಟ್ಟದ ಬೇಸಿಗೆ ಶಿಬಿರವನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಸುಮಾರು 48 ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಭಾಗವಹಿಸಿದ್ದರು.

* ಏಪ್ರಿಲ್ 14ರಂದು ವಿಶ್ವಜ್ಞಾನಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ 132ನೇ ಜಯಂತಿಯನ್ನು ಸ್ಕೌಟ್ ಭವನ ಕೋಲಾರ ಇಲ್ಲಿ ಆಯೋಜಿಸಲಾಗಿತ್ತು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ ಅವರ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಸ್ಕೌಟ್ ಆಯುಕ್ತ ಶ್ರೀ ಕೆ.ಆರ್. ಸುರೇಶ್, ಜಿಲ್ಲಾ ಕೋಶಾಧಿಕಾರಿ ಶ್ರೀ ಬಿ.ಆರ್.ಎಂ. ಉಮೇಶ್, ಜೊತೆ ಕಾರ್ಯದರ್ಶಿ ಶ್ರೀಮತಿ ಉಮಾದೇವಿ ಮತ್ತು ಪದಾಧಿಕಾರಿಗಳಾದ ಶ್ರೀ ಶಂಕರಪ್ಪ, ಶ್ರೀ ವಿನಯ್, ಶ್ರೀ ನಿರಂಜನ್, ಶ್ರೀ ಶಶಿ, ಶ್ರೀ ಹರಿಶ್, ಶ್ರೀ ವಸಂತ್, ಶ್ರೀ ಶಿವು, ಶ್ರೀ ಕಲ್ಪನ ಹಾಗೂ ಸ್ಕೌಟ್ಸ್-ಗೈಡ್ಸ್ ರೋವರ್ಸ್ ವಿದ್ಯಾರ್ಥಿಗಳು ಹಾಜರಿದ್ದರು.




## ಕೊಪ್ಪಳ

ಭಾರತ ಸ್ಕೌಟ್ಸ್-ಗೈಡ್ಸ್ ಜಿಲ್ಲಾ ಸಂಸ್ಥೆ ಕೊಪ್ಪಳದ ಘಟಕ ಹಂತದಲ್ಲಿ ಶಿಕ್ಷಣ ಇಲಾಖೆಯ ಸಹಕಾರದೊಂದಿಗೆ ಜಿಲ್ಲೆಯ ಸ್ಕೌಟ್ಸ್-ಗೈಡ್ಸ್ ಕಬ್ಸ್ & ಬುಲ್‌ಬುಲ್ಸ್ ಶಿಕ್ಷಕ / ಶಿಕ್ಷಕಿಯರು ತಮ್ಮ ಶಾಲೆಯ ಘಟಕ ಹಂತದಲ್ಲಿ ವಿದ್ಯಾರ್ಥಿಗಳೊಂದಿಗೆ ಬೇಸಿಗೆ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಅದರಲ್ಲಿ ವಿಶೇಷವಾಗಿ ಕುವೆಂಪು ಶತಮಾನೋತ್ಸವ ಶಾಲೆ ಕಿನ್ನಾಳ ಇಲ್ಲಿ ಏಪ್ರಿಲ್ 04 ರಿಂದ 11ರ ವರೆಗೆ ಎಂಟು ದಿನಗಳು ವಿಶೇಷ ಬೇಸಿಗೆ ಶಿಬಿರವನ್ನು ಏರ್ಪಡಿಸಿ ಏಪ್ರಿಲ್ 11 ರಂದು ವಿದ್ಯಾರ್ಥಿಗಳಿಗೆ ಪಂಪಾವನ ಸಾಲು ಮರದತಿಮ್ಮಕ್ಕ ಪಾರ್ಕ್ ಶ್ರೀ ಮಳೆಮಲ್ಲೇಶ್ವರ ದೇವಸ್ಥಾನ ಇಲ್ಲಿನ ಒಂದು ದಿನದ ಪ್ರವಾಸವನ್ನು ಏರ್ಪಡಿಸಲಾಯಿತು.



* ಏಪ್ರಿಲ್ 17 ರಿಂದ 20ರ ವರೆಗೆ ಸರ್ಕಾರಿ ಪ್ರೌಢ ಶಾಲೆ ಕವಲೂರು ಇಲ್ಲಿ ಎರಡು ಗೈಡ್ಸ್ ಘಟಕಗಳು 64 ಜನ ವಿದ್ಯಾರ್ಥಿಗಳೊಂದಿಗೆ ಶ್ರೀಮತಿ ಮಮತಾ ಕೋಡಬಾಳ ಗೈಡ್ಸ್ ಕ್ಯಾಪ್ಟನ್‌ರವರ ಶಿಬಿರವನ್ನು ನಾಯಕತ್ವದಲ್ಲಿ ಏರ್ಪಸಲಾಗಿತ್ತು.

* ಏಪ್ರಿಲ್ 18 ರಿಂದ 27ರ ವರೆಗೆ ಹತ್ತು ದಿನಗಳ ಕಾಲ ಸರ್ಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆ ಮೈನಳ್ಳಿ ತಾ॥ ಕೊಪ್ಪಳ ಇಲ್ಲಿ ಶ್ರೀ ಬಸವರಾಜಆರ್.ಸಿ, ಶ್ರೀ ನಾಗರಾಜ ಭೀಮನಗೌಡರ್ ಸ್ಕೌಟ್ಸ್ ಮಾಸ್ಟರ್ ಶ್ರೀಮತಿ ರೇಣುಕಾ ಪಾನಗಂಟಿ, ಶ್ರೀಮತಿ ಕವಿತಾ ಬಿ. ಅಕ್ಕಿ ಗೈಡ್ಸ್ ಕ್ಯಾಪ್ಟನ್‌ರವರು ಸುಮಾರು 150 ವಿದ್ಯಾರ್ಥಿಗಳಿಗೆ ವಿಶೇಷ ಬೇಸಿಗೆ ಶಿಬಿರವನ್ನು ಏರ್ಪಡಿಸಿದ್ದರು ಹಾಗೂ ಈ ಶಿಬಿರಕ್ಕೆ ಶ್ರೀಮತಿ ಮಲ್ಲೇಶ್ವರಿ ಜೂಜಾರಿ ಕಲ್ಯಾಣ ಕರ್ನಾಟಕ ಉಸ್ತುವಾರಿಗಳು ರೇಂಜರಿಂಗ್ ವಿಭಾಗದ ನಾಯಕಿಯರು ಶಿಬಿರಕ್ಕೆ ಭೇಟಿ ನೀಡಿ ಶಿಬಿರವನ್ನು ಉದ್ಘಾಟಿಸಿ ಭಾಗವಹಿಸಿದ ಎಲ್ಲಾ ಮಕ್ಕಳಿಗೆ ವಿಶೇಷ ಹಾಡುಗಳು ಚಟುವಟಿಕೆಗಳು ಮಾಡುವುದರೊಂದಿಗೆ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಶುಭ ಹಾರೈಸಿದರು. ಸಂದರ್ಭದಲ್ಲಿ ಶ್ರೀ ಮಲ್ಲಿಕಾರ್ಜುನ ಚೌಕಿಮಠ ಜಿಲ್ಲಾ ಆಯುಕ್ತರು ಸ್ಕೌಟ್ಸ್ ಶ್ರೀ ಮಾರುತಿ ಆರೇರ್ ಜಿಲ್ಲಾ ಕಾರ್ಯದರ್ಶಿಗಳು ಕೊಪ್ಪಳ ಭಾಗವಹಿಸಿದ್ದರು.



* ಕೊಪ್ಪಳ ಜಿಲ್ಲೆಯಲ್ಲಿ ಈವರೆಗೆ 49 ಶಾಲೆಗಳು, 81 ದಳಗಳು 1815 ವಿದ್ಯಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿರುತ್ತಾರೆ ಹಾಗೂ ಮುಂದುವರೆದು ಶಿಬಿರಗಳು ಘಟಕ ಹಂತಗಳಲ್ಲಿ ಪ್ರಾರಂಭದಲ್ಲಿರುತ್ತವೆ.

## ರಾಯಚೂರು

ಮಾರ್ಚ್ 18 ರಂದು ಜಿಲ್ಲಾ ಸಂಸ್ಥೆ ರಾಯಚೂರು ವತಿಯಿಂದ ಬೇಸಿಗೆ ಶಿಬಿರವನ್ನು ಜಿಲ್ಲೆಯ ವಿವಿಧ ಶಾಲಾ–ಕಾಲೇಜುಗಳಲ್ಲಿ ಪ್ರಾರಂಭೋತ್ಸವನ್ನು ಮಾಡಲಾಯಿತು. ಇದುವರೆಗೂ 4,587 ಮಕ್ಕಳು, ದಳ ನಾಯಕರು–154 ಭಾಗವಹಿಸಿದ್ದಾರೆ ಹಾಗೂ 67 ಶಾಲಾ–ಕಾಲೇಜುಗಳಲ್ಲಿ ಆಯೋಜನೆ ಮಾಡಲಾಗಿದೆ.

* ಮಾರ್ಚ್ 28 ರಂದು CEE And Unisef, ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ಮತ್ತು ಶ್ರೀ ವಿರಾಟ್ ಪದವಿ ಮಹಾ ವಿದ್ಯಾಲಯ, ಯಾಪಲದಿನ್ನಿ ಇವರುಗಳ ಸಂಯುಕ್ತಾಶ್ರಯದಲ್ಲಿ ಕಾಲೇಜಿನಲ್ಲಿ ಹವಾಮಾನ ಮತ್ತು ಪರಿಸರ ಶಿಕ್ಷಣ ತರಬೇತಿ ಕಾರ್ಯಾಗಾರವನ್ನು ಶ್ರೀ ಮಹೇಶ ನಾಯಕ, ಸಿ.ಆರ್.ಪಿ. ಯಾಪಲದಿನ್ನಿ ವಲಯರವರ ಅಧ್ಯಕ್ಷತೆಯಲ್ಲಿ ಆಯೋಜನೆ ಮಾಡಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀ ಅಂಬಣ್ಣ ನಾಯಕ ಮ್ಯಾಕಲ್ ಎಸ್.ಜಿ.ವಿ/ ಎಸ್.ಎಮ್.ಸಿ.ರವರು ಆಗಮಿಸಿದ್ದರು. ಹಾಗೂ ಉಪನ್ಯಾಸಕರಾಗಿ, ಶ್ರೀ ಕೃಷ್ಣ ನಾಯಕ ರೋವರ್ ಸ್ಕೌಟ್ ಲೀಡರ್, ಶ್ರೀಮತಿ ವಿದ್ಯಾ, ALT(B), ಶ್ರೀ ಮಲ್ಲಿಕಾರ್ಜುನ ಸ್ಕೌಟ್ಸ್ ಮಾಸ್ಟರ್‌ರವರು ಹವಾಮಾನ ಮತ್ತು ಪರಿಸರ ಶಿಕ್ಷಣ ಕುರಿತು ಸಂಪೂರ್ಣ ಮಾಹಿತಿಯನ್ನು ನೀಡಿದರು. ಇದೇ ಸಂದರ್ಭದಲ್ಲಿ ಶ್ರೀ ವೆಂಕಟೇಶ ಪ್ರಾಂಶುಪಾಲರು, ಶ್ರೀ ಈರಪ್ಪ, ಶ್ರೀ ಬಾಬು ಹಾಗೂ ರೋವರ್ಸ್–ರೇಂಜರ್ಸ ಮತ್ತು ಒಟ್ಟು 102 ಕಾಲೇಜಿನ ಮಕ್ಕಳು ಭಾಗವಹಿಸಿದ್ದರು.




* ಜಿಲ್ಲೆಯ ಮಾನ್ವಿ ಪಬ್ಲಿಕ್ ಸ್ಕೂಲ್, ಮಾನ್ವಿ ಶಾಲೆಯ ಸೈಯದ್ ತಮೀಮ್ ಖಾದ್ರಿ ಸ್ಕೌಟ್ ವಿದ್ಯಾರ್ಥಿಯು ಪಕ್ಷಿಗಳಿಗೆ ನೀರಿನ ವ್ಯವಸ್ಥೆ ಮಾಡಿದ್ದನು.



* ಏಪ್ರಿಲ್ 14 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ಜಿಲ್ಲಾ ಸ್ಕೌಟ್ ಭವನದಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಬಾಬಾ ಸಾಹೇಬ್ ಡಾ॥ ಬಿ.ಆರ್. ಅಂಬೇಡ್ಕರ್‌ರವರ 132ನೇ ಜಯಂತಿಯನ್ನು ಆಚರಣೆ





ಮಾಡಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಬಸವರಾಜ ಬೋರೆಡ್ಡಿ ಜಿಲ್ಲಾ ಆಯುಕ್ತರು (ಸ್ಕೌ), ಶ್ರೀ ಆರ್.ಎಚ್. ಸಾಗರ್ ಅಧ್ಯಕ್ಷರು ಸ್ಥಳೀಯ ಸಂಸ್ಥೆ ರಾಯಚೂರು, ಶ್ರೀಮತಿ ರಾಜಶ್ರೀ ಸಜ್ಜನ್ ಜಂಟಿ ಕಾರ್ಯದರ್ಶಿಗಳ(ಗೈ), ಶ್ರೀ ಎನ್. ಶೇಖರ್ ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ರಾಯಚೂರು, ಶ್ರೀಮತಿ ಸುಮಂಗಳಾ, ಜಿಲ್ಲಾ ಸ್ಥಾನೀಕ ಆಯುಕ್ತರು (ಗೈ), ಶ್ರೀಮತಿ ಶಕುಂತಲಾ, ಜಿಲ್ಲಾ ತರಬೇತಿ ಆಯುಕ್ತರು (ಗೈ), ಶ್ರೀ ಅಂಬಣ್ಣ ನಾಯಕ ಮ್ಯಾಕಲ್ ಎಸ್.ಜಿ.ವಿ/ ಎಸ್.ಎಮ್.ಸಿ. ರವರು ಉಪಸ್ಥಿತರಿದ್ದರು.

## ರಾಮನಗರ

ಕನಕಪುರ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ವೈ. ಗೋಪಾಲ್ ಅವರು ತಮ್ಮ ಆರ್.ಹೆಚ್.ಎಸ್. ಸಾತನೂರು ಶಾಲೆಯ ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳಿಗೆ ಏಪ್ರಿಲ್ 14 ರಂದು ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್‌ರವರ 132ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಬೇಸಿಗೆ ಶಿಬಿರದ ಸಂದರ್ಭದಲ್ಲಿ ಸಂಘಟನೆ ಮಾಡಿ ನಂತರ ಸಾತನೂರು, ಸಮೀಪದ ಶ್ರೀ ಬಂಡೇ ಬಸವೇಶ್ವರ ಸ್ವಾಮಿ ದೇವಸ್ಥಾನ ನಾಗರಸನ ಕೋಟೆ ಬೆಟ್ಟಕ್ಕೆ ಚರಣವನ್ನು ಕೈಗೊಂಡು ಬೆಟ್ಟ ಸುತ್ತಮುತ್ತ ಪ್ರದೇಶವನ್ನು ಸ್ವಚ್ಛತೆ ಮಾಡಿ ಪ್ಲಾಸ್ಟಿಕ್ ತ್ಯಾಜ್ಯ ವಿಲೇವಾರಿ ಮಾಡಿ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಹಾಗೂ ಈ ಸಂದರ್ಭದಲ್ಲಿ ಆರ್.ಹೆಚ್.ಎಸ್. ಸಾತನೂರು ಶಾಲೆಯ ಮುಖ್ಯ ಶಿಕ್ಷಕರು ಮತ್ತು ಸಹಶಿಕ್ಷಕರು ಭಾಗವಹಿಸುವ ಸಹಕಾರ ನೀಡಿದರು.

* ಏಪ್ರಿಲ್ 11 ರಂದು ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಕೋಡಿಹಳ್ಳಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಸಂಗಯ್ಯ ಮಠಪತಿರವರು ತಮ್ಮ ಜಿ.ಎಂ.ಪಿ.ಎಸ್. ಕೋಡಿಹಳ್ಳಿ ಹಾಗೂ ಎಸ್.ಎಸ್.ಹೆಚ್.ಎಸ್. ಕೋಡಿಹಳ್ಳಿ ಶಾಲೆಯ ಸ್ಕೌಟ್ಸ್–ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ 2022–2023ನೇ ಸಾಲಿನ ಬೇಸಿಗೆ ಶಿಬಿರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

* ರಾಮನಗರ ಸ್ಥಳೀಯ ಸಂಸ್ಥೆಯ ಜಿ.ಹೆಚ್.ಪಿ.ಎಸ್. ಬಿಡದಿ ಶಾಲೆ ಗೈಡ್ಸ್ ಕ್ಯಾಪ್ಟನ್ ಶ್ರೀಮತಿ ಜೋತಿ ಎನ್.ರವರು ತಮ್ಮ ಘಟಕದ ವತಿಯಿಂದ ಬೇಸಿಗೆ ಶಿಬಿರ ಸಂಘಟನೆ ಮಾಡಲಾಗಿದ್ದು. ಈ ಸಂದರ್ಭದಲ್ಲಿ ಜಿಲ್ಲಾ ಆಯುಕ್ತರು ಗೈಡ್ಸ್ ವಿಭಾಗ ರಾಮನಗರ ಶ್ರೀ ಭಾರತಿ ಜೆ.ವಿ.ರವರು ಭೇಟಿಯಾಗಿ ಶಿಬಿರಾರ್ಥಿಗಳಿಗೆ ಸ್ಕೌಟಿಂಗ್ ಶಿಕ್ಷಣವನ್ನು ಬೋಧನೆ ಮಾಡಿ, ನಂತರ ವಿದ್ಯಾರ್ಥಿಗಳ ಪ್ರಗತಿ ಪರಿಶೀಲನೆ ನಡೆಸಿದ್ದಾರೆ.




* ಏಪ್ರಿಲ್ 05 ರಂದು ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಕೋಡಿಹಳ್ಳಿ ಸ್ಥಳೀಯ ಸಂಸ್ಥೆಯ ಜಿ.ಹೆಚ್.ಪಿ.ಎಸ್. ದಾಳಿಂಬ ಶಾಲೆಯ ಬುಲ್‌ಬುಲ್ ವಿದ್ಯಾರ್ಥಿಗಳಿಗೆ 2022–2023ನೇ ಸಾಲಿನ ಬೇಸಿಗೆ ಶಿಬಿರ ಕಾರ್ಯಕ್ರಮ ಶ್ರೀದೇವಿ ಜೀರಗಾಳೆ ರವರು ತಮ್ಮ ಘಟಕದ ವತಿಯಿಂದ ಹಮ್ಮಿಕೊಳ್ಳಲಾಗಿತ್ತು.



* ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಕೋಡಿಹಳ್ಳಿ ಸ್ಥಳಿಯಿಂದ ಏಪ್ರಿಲ್ 01 ರಂದು ವಿ.ವಿ. ಪ್ರಾಥಮಿಕ ಶಾಲಾ ಕೋಡಿಹಳ್ಳಿ ಇಲ್ಲಿ ಸ್ಕೌಟ್ಸ್–ಗೈಡ್ಸ್‌ಗಳಿಗೆ 2022–2023ನೇ ಸಾಲಿನ ಬೇಸಿಗೆ ಶಿಬಿರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಅಂತಿಮ ದಿನದಂದು ಕಾರ್ಯದರ್ಶಿ ಭೇಟಿ ನೀಡಿ ಶಿಬಿರಾರ್ಥಿಗಳಿಗೆ ಶುಭಾಶಯಗಳು ತಿಳಿಸಿದ್ದಾರೆ.



## ಶಿವಮೊಗ್ಗ

ಮಾರ್ಚ್ 31 ರಂದು ಜಿಲ್ಲಾ ಸಂಸ್ಥೆ ಹಾಗೂ ಅಶೋಕ ಸಂಜೀವಿನಿ ಆಸ್ಪತ್ರೆಯ ಸಹಯೋಗದೊಂದಿಗೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಶಿವಮೊಗ್ಗ ಜಿಲ್ಲಾ ಸ್ಕೌಟ್ ಭವನದಲ್ಲಿ ಆಚರಿಸಲಾಯಿತು. ಡಾ॥ ಸೋನಿಯಾ ಅಮಿತ್ ಕುಮಾರರವರಿಗೆ ಜಿಲ್ಲಾ ಸಂಸ್ಥೆ ವತಿಯಿಂದ ಸನ್ಮಾನಿಸಲಾಯಿತು. ಅವರು ಮಾತನಾಡುತ್ತಾ “ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರಿಗೆ ಮುಕ್ತ ಅವಕಾಶಗಳನ್ನು ನೀಡಲಾಗುತ್ತಿದೆ, ಸಾಹಿತ್ಯ, ಕಲೆ, ಕ್ರೀಡೆ, ಆಧ್ಯಾತ್ಮಾ, ತಾಂತ್ರಿಕವಾಗಿ ಹಾಗೂ ಎಲ್ಲಾ ಕ್ಷೇತ್ರಗಳಲ್ಲೂ ಹೆಣ್ಣು ಮಕ್ಕಳು ಮುಂದುವರೆದಿದ್ದಾರೆ ಮತ್ತು ಮಿಂಚುತಿದ್ದಾರೆ. ಅಲ್ಲದೆ ಒಂದು ಮನೆಯಿಂದ ಇನ್ನೊಂದು ಮನೆಗೆ ಹೋಗಿ ಜ್ಯೋತಿಯಾಗಿ ಪ್ರಜ್ವಲಿಸಿ ತನ್ನ ತನವನ್ನು ಮೆರೆಯುವ ಸ್ತ್ರೀಯಾಗಿ ಹೊರಹೊಮ್ಮಿದ್ದಾಳೆ” ಎಂದು ನುಡಿದರು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಹೆಚ್.ಡಿ. ರಮೇಶಶಾಸ್ತ್ರಿಯವರು ಹಾಗೂ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಕೆ.ಪಿ. ಬಿಂದುಕುಮಾರ ಅವರು ಮಾತನಾಡುತ್ತಾ



ಎಲ್ಲರಿಗೂ ಮಹಿಳಾ ದಿನಾಚರಣೆಯ ಶುಭಕೋರಿ ವೀರಮಹಿಳೆಯರ ಉದಾಹರಣೆ ತೆಗೆದುಕೊಂಡು ಅವರಂತೆ ಮುಂದುವರೆಯಲು ಕರೆ ನೀಡಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಶಕುಂತಲಾ ಚಂದ್ರಶೇಖರ್‌ರವರು ಮಾತನಾಡುತ್ತಾ "ಒಂದು ವಾಕ್ಯ ಅರ್ಥಪೂರ್ಣ ವಾಗಲು ಪದಗಳು ಎಷ್ಟು ಮುಖ್ಯವೋ, ಲೇಖನಾ ಚಿಹ್ನೆಗಳು ಅಷ್ಟೇ ಮುಖ್ಯ. ಪುರುಷರು ಪದಗಳಾದರೆ, ಮಹಿಳೆಯರು ಲೇಖನ ಚಿಹ್ನೆಯಂತೆ". ಎಂದರು. ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀಮತಿ ಭಾರತಿ ಡಾಯಸ್ ಎಲ್.ಟಿ.ರವರು ನಿರೂಪಣೆಯನ್ನು ಹಾಗೂ ಪ್ರಾಸ್ತಾವಿಕ ನುಡಿಯನ್ನು ನುಡಿದರು ಸ್ವಾಗತವನ್ನು ಶ್ರೀಮತಿ ಲಕ್ಷ್ಮೀರಾವಿ ಕೋರಿದರು, ವಂದನೆಯನ್ನು ಶ್ರೀಮತಿ ಹೇಮಲತಾ ನಿರ್ವಹಿಸಿದರು, ಈ ಸಮಾರಂಭದಲ್ಲಿ ಜಿಲ್ಲಾ ಪದಾಧಿಕಾರಿಗಳು ಹಿರಿಯ ಸ್ಕೌಟರ್ಸ್ – ಗೈಡರ್ಸ್‌ಗಳು, ಅಶೋಕಸಂಜೀವಿನಿ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

* ಏಪ್ರಿಲ್ 14 ರಂದು ಜಿಲ್ಲಾ ಸಂಸ್ಥೆಯ ವತಿಯಿಂದ ಭಾರತದ ಸಂವಿಧಾನ ಶಿಲ್ಪಿ ಡಾ|| ಬಿ.ಆರ್. ಅಂಬೇಡ್ಕರ್‌ರವರ 132ನೇ ಜನ್ಮ ದಿನಾಚರಣೆ ಆಚರಿಸಲಾಯಿತು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಹೆಚ್.ಡಿ. ರಮೇಶ್ ಶಾಸ್ತ್ರಿರವರು ಅಂಬೇಡ್ಕರ್‌ರವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ನಮನಗಳನ್ನು ಸಲ್ಲಿಸಿ. "ಸ್ವಾತಂತ್ರ್ಯದ ನಂತರ ಭಾರತ ಸರ್ಕಾರದ ರಚನೆಗೆ ಪ್ರಮುಖ ಪಾತ್ರವಹಿಸಿ, ದೇಶದ ಸಂವಿಧಾನ ರಚಿಸುವ ಸಮಿತಿಯ ಅಧ್ಯಕ್ಷರಾಗಿ ಭಾರತ ಸಂವಿಧಾನವನ್ನು 1950ರಲ್ಲಿ ರಚಿಸಿ ಭಾರತ ಒಂದು ಗಣರಾಜ್ಯವೆಂದು ಘೋಷಿಸುವಲ್ಲಿ ಯಶಸ್ವಿಯಾದರು" ಎಂದರು. ಇದೇ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದಂತಹ ಶ್ರೀ ಹೆಚ್.ಡಿ. ರಮೇಶಶಾಸ್ತ್ರಿರವರ ಹುಟ್ಟು ಹಬ್ಬವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಪದಾಧಿಕಾರಿಗಳು ಸ್ನೇಹಮಯಿ ಸಂಘದ ಅಧ್ಯಕ್ಷರಾದ ಶ್ರೀ ಎಸ್. ಚಿನ್ನಪ್ಪನವರು, ಕಬ್, ಸ್ಕೌಟ್ಸ್–ಗೈಡ್ಸ್‌ಗಳು ಉಪಸ್ಥಿತರಿದ್ದರು.



## ಉಡುಪಿ

ಜಿಲ್ಲಾ ಮಟ್ಟದ ಕಬ್ ಬುಲ್ ಬುಲ್ ಉತ್ಸವವು ಡಾ|| ವಿ.ಎಸ್. ಆಚಾರ್ಯ ಜಿಲ್ಲಾ ತರಬೇತಿ ಕೇಂದ್ರ ಪ್ರಗತಿ ನಗರ ಇಲ್ಲಿ ಸ್ಥಳೀಯ ಸಂಸ್ಥೆ ಉಡುಪಿ ಇವರ ಸಹಯೋಗದಲ್ಲಿ ನಡೆಯಿತು. ಸುಮಾರು 400 ಕ್ಕಿಂತ ಹೆಚ್ಚು ಕಬ್ ಬುಲ್ ಬುಲ್ ಮಕ್ಕಳು 40 ಶಿಕ್ಷಕರು 10 ಮಂದಿ ಸರ್ವಿಸ್ ರೋವರ್ಸ್ ರೇಂಜರ್ಸ್ ಭಾಗವಹಿಸಿದ್ದರು.



* ಫೆಬ್ರವರಿ 23 ರಂದು ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಇವರ ಮುಂದಾಳತ್ವದಲ್ಲಿ ಮಾನ್ಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿ ಅವರ ಕಚೇರಿಯಲ್ಲಿ ಉಡುಪಿ ಜಿಲ್ಲೆಯ ಪ್ರಗತಿ ಪರಿಶೀಲನ ಸಭೆಯನ್ನು ನಡೆಸಲಾಯಿತು.



* ಸೈಂಟ್ ಅಂತೋನಿ ಆಂಗ್ಲ ಮಾಧ್ಯಮ ಶಾಲೆ ಬ್ರಹ್ಮವಾರ ಇಲ್ಲಿ ಸ್ಕೌಟ್–ಗೈಡ್ಸ್ ಮಕ್ಕಳು ಪ್ರವೇಶದಿಂದ ಹಿಡಿದು ತೃತೀಯ ಸೋಪಾನದವರೆಗಿನ ಎಲ್ಲಾ ವಿಷಯಗಳನ್ನು ಚಾರ್ಟ್ ಹಾಗೂ ಪ್ರತ್ಯೇಕ್ಷಿಕವಾಗಿ ಪ್ರದರ್ಶಿಸಿದರು ಹಾಗೂ ಸ್ಕೌಟ್ಸ್ ಗೈಡ್ಸ್ ಮಕ್ಕಳಿಂದ ವಿಜ್ಞಾನ ಮಾದರಿಗಳ ಪ್ರದರ್ಶನ ಬಹಳ ಅದ್ಭುತವಾಗಿ ನಡೆಸಿಕೊಟ್ಟರು.

* ಫೆಬ್ರವರಿ 24ರಂದು ಶ್ರೀ ಸಿದ್ಧಿವಿನಾಯಕ ರೆಸಿಡೆನ್ಸಿ ಸ್ಕೂಲ್ ಹಟ್ಟಿ ಅಂಗಡಿ ಇಲ್ಲಿ ಜಿಲ್ಲಾ ರ್‍ಯಾಲಿ ನಡೆಯಿತು. ಇದರ ಉದ್ಘಾಟನೆಯನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಮಾಡಿ, ಸ್ಕೌಟ್–ಗೈಡ್ಸ್ ಮಕ್ಕಳಿಗೆ ಶುಭ ಹಾರೈಸಿದರು. ಈ ಕಾರ್ಯಕ್ರಮದಲ್ಲಿ ಮಾನ್ಯ ಉಪ ನಿರ್ದೇಶಕರಾದ ಶ್ರೀ ಗಣಪತಿ, ಜಿಲ್ಲಾ ಗೈಡ್ ಆಯುಕ್ತರದ ಶ್ರೀಮತಿ ಜ್ಯೋತಿ ಜೆ. ಪೈ, ಜಿಲ್ಲಾ ಸ್ಕೌಟ್ ಆಯುಕ್ತರಾದ ಡಾಕ್ಟರ್ ವಿಜಯೇಂದ್ರ ವಸಂತರಾವ್, ಶ್ರೀಮತಿ ಗುಣರತ್ನ ಉಪಾಧ್ಯಕ್ಷರು, ಶಾಲಾ ಪ್ರಾಂಶುಪಾಲರು, ಜಿಲ್ಲಾ ಕಾರ್ಯದರ್ಶಿ ಶ್ರೀ ಆನಂದ್ ಬಿ. ಅಡಿಗ, ಜಿಲ್ಲಾ ತರಬೇತಿ ಆಯುಕ್ತರು ಶ್ರೀಮತಿ ಸಾವಿತ್ರಿ ಮನೋಹರ್ ಹಾಗೂ ಎಲ್ಲಾ



ಜಿಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಶ್ರೀಮತಿ ಸುಮನ್ ಶೇಖರ್, ರಾಜ್ಯ ಸಹಾಯಕ ಸಂಘಟನಾ ಆಯುಕ್ತ ಸಂಘಟಿಸಿದರು.

* ಮಾನ್ಯ ಜಿಲ್ಲಾಧಿಕಾರಿಯವರು ತುರ್ತಾಗಿ ಜಿಲ್ಲಾ ತರಬೇತಿ ಕೇಂದ್ರದಲ್ಲಿ ಸಭೆ ಕರೆದು. ರಾಜ್ಯ ಮುಖ್ಯ ಆಯುಕ್ತರು ಜಿಲ್ಲಾಧಿಕಾರಿ ಅವರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಜಿಲ್ಲಾಧಿಕಾರಿಯವರಿಗೆ ಜಿಲ್ಲಾ ತರಬೇತಿ ಕೇಂದ್ರ ಪ್ರಗತಿಯ ಬಗ್ಗೆ ಕೊಟ್ಟಿರುವ ಮನವಿಯನ್ನು ಕಾರ್ಯಗತ ಮಾಡಿದರು. ಈ ಸಭೆಯಲ್ಲಿ ನಿರ್ಮಿತಿ ಕೇಂದ್ರದ ಅಧಿಕಾರಿಗಳು, ವಿಜ್ಞಾನ ಕೇಂದ್ರದ ಸಂಬಂಧಪಟ್ಟ ಅಧಿಕಾರಿಗಳು ಇದರ ಸಂಯೋಜಕರಾಗಿರುವ ಶ್ರೀ ಅಶೋಕ ಕಾಮತ್, ಕೇಂದ್ರ ವಿದ್ಯಾಲಯದ ಪ್ರಾಂಶುಪಾಲರು. ಜಿಲ್ಲಾ ಸ್ಕೌಟ್ ಆಯುಕ್ತರದ ಡಾಕ್ಟರ್ ವಿಜಯೇಂದ್ರ ವಸಂತರಾವ್ ಎ.ಎಸ್.ಓ.ಸಿ. ಶ್ರೀಮತಿ ಸುಮನ್ ಶೇಖರ್ ಭಾಗವಹಿಸಿದ್ದರು.



* ಇಂದ್ರಾಳಿ ರೈಲ್ವೆ ನಿಲ್ದಾಣದಲ್ಲಿ 60ನೇ ತಿಂಗಳ ಸ್ವಚ್ಛತಾ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮವು ರೈಲ್ವೆ ಆಫೀಸರ್ ಆಗಿರುವಂತಹ ಶ್ರೀ ಎಸ್.ಕೆ. ಭಟ್ ಇವರ ನೇತೃತ್ವ ಹಾಗೂ ಸಂಪೂರ್ಣ ಸಹಕಾರದೊಂದಿಗೆ ನಡೆಯಿತು. ಈ ಕಾರ್ಯಕ್ರಮದಲ್ಲಿ ಎಸ್.ಆರ್.ಎಸ್. ಶಾಲೆಯ ಪ್ರಾಂಶುಪಾಲರಾಗಿರುವ ಹಾಗೂ ಉಡುಪಿ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾಗಿರುವ ಶ್ರೀ ವಿನ್ಸೆಂಟ್ ಡಿಕೋಸ್ಟ ತಮ್ಮ ಶಾಲೆಯ ತೃತೀಯ ಸೋಪಾನ ಹಾಗೂ ರಾಜ್ಯ ಪುರಸ್ಕಾರ ಪರೀಕ್ಷೆಗೆ ಅರ್ಹರಾಗಿರುವ ಸುಮಾರು 25 ಮಕ್ಕಳು ಹಾಗೂ ಶಿಕ್ಷಕರೊಂದಿಗೆ ಈ ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಉಡುಪಿ ಜಿಲ್ಲೆಯ ಸುಮಾರು ಎಂಟು ಕಾಲೇಜುಗಳಿಂದ ರೋವರ್ಸ್ ರೆಂಜರ್ಸ್ ಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯದರ್ಶಿಯಾಗಿರುವಂತಹ ಶ್ರೀ ಆನಂದ್ ಬಿ. ಅಡಿಗ ಉಪಸ್ಥಿತರಿದು.

– ಜಿಲ್ಲಾ ತರಬೇತಿ ಕೇಂದ್ರ ಡಾ. ವಿ.ಎಸ್. ಆಚಾರ್ಯ ಪ್ರಗತಿನಗರ ಅಲೆವೂರು. ಇಲ್ಲಿ ಮಕ್ಕಳ ಸಾಹಸಮಯ ಚಟುವಟಿಕೆ ಬೇಕಾಗಿರುವಂತಹ ಮೂಲ ಸೌಕರ್ಯಗಳನ್ನು ಮಾಡುವ ಬಗ್ಗೆ ಸ್ಥಳ ಮತ್ತು ಮಾಡಬಹುದಾದ ಚಟುವಟಿಕೆಗಳಿಂದು ಸಮೀಕ್ಷೆ ಮಾಡಲು ರಾಜ್ಯ ಪ್ರತಿನಿಧಿಯಾಗಿ ದಾವಣಗೆರೆ ಜಿಲ್ಲೆಯ ಶ್ರೀ ಶಿವಣ್ಣ ಇವರು ಆಗಮಿಸಿದ್ದು ಇವರಿಗೆ ಸೂಕ್ತ ಮಾಹಿತಿ ಜಿಲ್ಲಾ ಕಾರ್ಯದರ್ಶಿಯಾಗಿರುವ ಶ್ರೀ ಆನಂದ್ ಬಿ. ಅಡಿಗ. ಜೊತೆ ಕಾರ್ಯದರ್ಶಿ ಶ್ರೀ ರಾಘವೇಂದ್ರ, ಎ.ಜಿ.ಓ. ಆಗಿರುವ ವಿತೀಶ್ ಕಾಂಚನ್. ಹಾಗೂ ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀಮತಿ ಸುಮನ್ ಶೇಖರ್ ನೀಡಿದರು.

* ಮಹಿಳಾ ದಿನಾಚರಣೆಯ ಪ್ರಯುಕ್ತ ಶ್ರೀ ಜಿ. ಶಂಕರ್, ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಇಲ್ಲಿ ರೇಂಜರ್ಸ್ ಘಟಕ ಮತ್ತು ಮಹಿಳಾ ದರ್ಜೆ ಕಾಲೇಜು ಇಲ್ಲಿ ರೇಂಜರ್ಸ್ ಘಟಕ ಮತ್ತು ಮಹಿಳಾ ವೇದಿಕೆ ಸಹಯೋಗದಲ್ಲಿ ವಿಶ್ವ. ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಡಾಕ್ಟರ್ ಚಿತ್ರಲೇಖ ಇವರು ಭಾಗವಹಿಸಿ ಮಹಿಳೆಯರ ಆರೋಗ್ಯಕ್ಕೆ ಸಂಬಂಧಪಟ್ಟಂತಹ ಸ್ತನ ಕ್ಯಾನ್ಸರ್, ಋತುಚಕ್ರದ ಬಗ್ಗೆ, ತಮ್ಮ ದಿನನಿತ್ಯದ ಜೀವನ ಶೈಲಿಯ ಬಗ್ಗೆ ಬಹಳ ಸವಿಸ್ತಾರವಾಗಿ ತಿಳಿಸುವುದರ ಜೊತೆಗೆ ಸಂವಾದ ಕಾರ್ಯಕ್ರಮವು ನಡೆಯಿತು. ಈ ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾಕ್ಟರ್ ಭಾಸ್ಕರ್ ಶೆಟ್ಟಿ ಭಾಗವಹಿಸಿ ಮಹಿಳೆಯರಿಗೆ ಶುಭ ಹಾರೈಸುವುದರ ಜೊತೆಗೆ ನಮ್ಮನ್ನು ನಾವು ಬೆಳೆಸಿಕೊಳ್ಳುವುದರ ಜೊತೆಗೆ ನಾವು ಸಮಾಜವನ್ನು ಬೆಳೆಸೋಣ ಎಂಬ ಕಿವಿ ಮಾತನ್ನು ಹೇಳಿದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಉಪಾಧ್ಯಕ್ಷರಾಗಿರುವಂತಹ ಶ್ರೀಮತಿ ಜ್ಯೋತಿ ಹೆಬ್ಬಾರ್, ರೇಂಜರ್ ಲೀಡರ್ ಶ್ರೀಮತಿ ಸುಚಿತ್ರ, ರೇಂಜರ್ ಲೀಡರ್ ಶ್ರೀಮತಿ ವಾರಿಜ ಹಾಗೂ ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಶ್ರೀಮತಿ ಸುಮನ್ ಶೇಖರ್ ಉಪಸ್ಥಿತರಿದ್ದರು.

* ಶ್ರೀ ಆತ್ರಾಡಿ ವಿಜಯ ಮಕ್ಕಳ ಕೂಟ ಆಂಗ್ಲ ಮಾಧ್ಯಮ ಶಾಲೆಯ ತೃತೀಯ ಸೋಪಾನ ಮತ್ತು ರಾಜ್ಯ ಪುರಸ್ಕಾರ ಅರ್ಹ ಇರುವ ಸ್ಕೌಟ್– ಗೈಡ್ಸ್ ಮಕ್ಕಳಿಗೆ ಜಿಲ್ಲಾ ತರಬೇತಿದಾರರಾದ ಶ್ರೀ ಆನಂದ್ ಬಿ. ಅಡಿಗ ಹಾಗೂ ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಶ್ರೀಮತಿ ಸುಮನ್ ಶೇಖರ್ ಒಂದು ದಿನದ ತರಬೇತಿ ನೀಡಿ. ಮಕ್ಕಳಿಗೆ ಜಿಲ್ಲಾ ಪುರಸ್ಕಾರ ಹಾಗೂ ರಾಜ್ಯ ಪುರಸ್ಕಾರ ಪರೀಕ್ಷೆಗಳಿಗೆ ಸಜ್ಜುಗೊಳಿಸಲಾಯಿತು. ಈ ಸಂದರ್ಭದಲ್ಲಿ ನೂತನವಾಗಿ ಕಾರ್ಯದರ್ಶಿ ಹುದ್ದೆಗೆ ಪದೋನ್ನತಿ ಪಡೆದಿರುವ ಅಂತಹ. ಶ್ರೀ ಆನಂದ್ ಬಿ. ಅಡಿಗ ಇವರನ್ನು ಶಾಲಾ ಸಂಚಾಲಕರು ಮಾನ್ಯ ಶ್ರೀ ಸುಭಾಷ್ ಚಂದ್ರ ಶೆಟ್ಟಿ ಹಾಗೂ ಪ್ರಾಂಶುಪಾಲರು ಶ್ರೀಮತಿ ದೀಪಿಕಾ ಸುಭಾಷ್ ಚಂದ್ರ ಶೆಟ್ಟಿ ಗೌರವಿಸಿ ಅಭಿನಂದಿಸಿದರು.



## ಯಾದಗಿರಿ

ಸ್ಥಳೀಯ ಸಂಸ್ಥೆ ಶಹಾಪುರ ವತಿಯಿಂದ ಏಪ್ರಿಲ್ 05 ರಂದು ಬೇಸಿಗೆ ಶಿಬಿರದ ಮುಕ್ತಾಯ ಸಮಾರಂಭವನ್ನು "ಶಹಾಪುರ ಸ್ಥಳೀಯ ಸಂಸ್ಥೆಯ ಸ್ಕೌಟ್ಸ್ ಮತ್ತು ಗೈಡ್ಸ್ ಕಛೇರಿ"ಯಲ್ಲಿ ಆಯೋಜಿಸಲಾಗಿತ್ತು. ಬೇಸಿಗೆ ಶಿಬಿರವನ್ನು ಆಯೋಜಿಸಿರುವಂತಹ ಶಾಲೆಗಳ ಕಬ್ಸ್, ಬುಲ್ ಬುಲ್ಸ್, ಸ್ಕೌಟ್ಸ್, ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು ಹಾಗೂ ಈ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು ಶ್ರೀ ಬಸವರಾಜ್ ಗೋಗಿ, ಫ್ಲಾಕ್ ಲೀಡರ್ಸ್, ಸ್ಕೌಟ್ ಮಾಸ್ಟರ್ಸ್, ಗೈಡ್ ಕ್ಯಾಪ್ಟನ್ಸ್‌ರವರು ಉಪಸ್ಥಿತರಿದ್ದರು.



# ಬೇಸಿಗೆಯ ದಾಹ ನೀಗಿಸುವ ನೀರು

– ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ
ಮಕ್ಕಳ ಹೃದಯ ತಜ್ಞರು, ಬೆಂಗಳೂರು

ಬೇಸಿಗೆಯಲ್ಲಿ ಬೆವರು ಸುರಿದು ಶರೀರದಲ್ಲಿರುವ ನೀರು ಲವಣಗಳ ಅಂಶ ಕಡಿಮೆ ಆಗಿ ಸುಸ್ತಾಗುತ್ತದೆ. ಹೀಗೆ ಸುಸ್ತಾದವರು ಹಳೆ ಕಾಲದಲ್ಲಿ ಒಂದು ತುಂಡು ಬೆಲ್ಲ ಜೊತೆಗೆ ಮಣ್ಣಿನ ಹೂಜಿಯಲ್ಲಿಯ ತಂಪಾದ ನೀರನ್ನು ಕುಡಿದು ಮನಸ್ಸನ್ನು ಆಹ್ಲಾದಗೊಳಿಸುತ್ತಿದ್ದರು. ಆದರೆ ಇಂದು ಜನರು ಫ್ರಿಡ್ಜ್‌ನಲ್ಲಿಟ್ಟ ಕೊರೆಯುವ ಚಿಲ್ಡ್ ನೀರನ್ನು ಕುಡಿಯುತ್ತಿದ್ದಾರೆ. ಊಟಕ್ಕೆ ಹೋಟೆಲಿಗೆ ಹೋದಾಗ ಕೂಡ ಚಿಲ್ಡ್ ನೀರು ಆರ್ಡರ್ ಮಾಡುತ್ತಾರೆ. ಬನ್ನಿ ಈ ಬದಲಾದ ಜೀವನ ಪದ್ಧತಿ ಎಷ್ಟು ಹಾನಿಕಾರಕ ತಿಳಿದುಕೊಳ್ಳೋಣ.

ತುಂಬಾ ತಂಪಾದ ನೀರು ಅಥವಾ ಪಾನೀಯ ಕುಡಿದಾಗ ಹೊಟ್ಟೆಗೆ ಸರಬರಾಜು ಆಗುವ ರಕ್ತನಾಳಗಳು ಸಂಕುಚಿತಗೊಂಡು, ಜೀರ್ಣ ಶಕ್ತಿ ಕಡಿಮೆಯಾಗುತ್ತಿದೆ. ಇದರಿಂದ ನಾವು ಸೇವಿಸಿದ ಆಹಾರದಿಂದ ಪೋಷಕಾಂಶಗಳು ಹೀರಿಕೊಳ್ಳುವುದು ಕಡಿಮೆ ಆಗಿ ಅಪೌಷ್ಟಿಕತೆ ಉಂಟಾಗುತ್ತದೆ. ಆದ್ದರಿಂದ ತಂಪು ನೀರು ಪಾನೀಯ ಕುಡಿಯಲೇಬಾರದು, ಎರಡನೆಯದಾಗಿ ವೇಗಸ್ ನರ್ವ್ Stimulate ಆಗಿ ನಮ್ಮ ಹೃದಯದ ಬಡಿತದ ವೇಗ ಕಡಿಮೆ ಆಗುತ್ತದೆ. ವ್ಯಾಯಾಮ ಮಾಡಿದ ನಂತರ ಚಿಲ್ಡ್ ಪಾನೀಯ, ನೀರು ಕುಡಿಯಲೇಬಾರದು. ಉಗುರು ಬೆಚ್ಚಗಿನ ನೀರನ್ನು ವ್ಯಾಯಾಮದ ನಂತರ ಕುಡಿಯಬೇಕೆಂದು Gym Guide ಹೇಳುತ್ತಾರೆ. ತಂಪು ಪಾನೀಯದಿಂದ ಮಲಬದ್ಧತೆ ಹೆಚ್ಚಾಗಿ ಆಗುತ್ತದೆ. ಮಲಬದ್ಧತೆ ಆದರೆ ತಲೆನೋವು, ಹೊಟ್ಟೆನೋವು ಹೆಚ್ಚಾಗುತ್ತದೆ. ಹಲ್ಲು ಜುಂ ಅನ್ನುವುದು, (tooth sensitivity) ಶ್ವಾಶಕೋಶದಲ್ಲಿ ಕಫ ಗಟ್ಟಿಯಾಗಿ ಉಸಿರಾಡಲು ತೊಂದರೆ ಆಗಬಹುದು. ರೋಗನಿರೋಧಕ ಶಕ್ತಿ ಕೂಡ ಕುಂಠಿತ ಆಗಬಹುದು. ಅಜೀರ್ಣ ಉಂಟಾಗಬಹುದು. ಇದರಿಂದ ದಾಹನೀಗುವ ಬದಲು ಅನಾರೋಗ್ಯದ ಗೂಡಾಗುವುದು ನಮ್ಮ ಶರೀರ. ಐಸ್ ನೀರನ್ನು ವಿಪರೀತ ಸೇವಿಸಿದರೆ Brain Freeze ಆಗುವುದು. ಇದರಿಂದ ತಲೆನೋವು ಉಂಟಾಗುತ್ತದೆ. ಆದ್ದರಿಂದ ಬನ್ನಿ. ಬೇಸಿಗೆ ದಾಹಕ್ಕೆ ಎಳನೀರು, ಬೆಲ್ಲದಲ್ಲಿ ಮಾಡಿದ ಲಿಂಬೆ ಪಾನಕ, ಹಣ್ಣಿನ ರಸ ಸೇವಿಸಿ ಆರೋಗ್ಯವಂತರಾಗಿರೋಣ.

# 2023 ಮೇ ತಿಂಗಳ ಕಾರ್ಯಕ್ರಮಗಳು

| ಕ್ರಮ ಸಂಖ್ಯೆ | ಕಾರ್ಯಕ್ರಮ | ದಿನಾಂಕ | ಸ್ಥಳ |
|---|---|---|---|
| 1 | ಮತದಾನ ಜಾಗೃತಿ ಕಾರ್ಯಕ್ರಮ | ಮೇ 2023 | ದಳಮಟ್ಟದಲ್ಲಿ |
| 2 | ಬೇಸಿಗೆ ಶಿಬಿರಗಳು | ಮೇ 2023 | ದಳಮಟ್ಟದಲ್ಲಿ |
| 3 | ಮುಕ್ತದಳಗಳ ನಾಯಕರುಗಳ ಸಭೆ | 20.05.2023 | ರಾಜ್ಯ ಕೇಂದ್ರ ಕಛೇರಿ ಶಾಂತಿಗೃಹ, ಬೆಂಗಳೂರು |
| 4 | ಕಾಲೇಜು ಅಧ್ಯಾಪಕರುಗಳಿಗೆ ವಿಶ್ವವಿದ್ಯಾನಿಲಯಗಳ ಮಟ್ಟದಲ್ಲಿ ಕಾರ್ಯಾಗಾರ | ಮೇ 2023 | ವಿಶ್ವವಿದ್ಯಾನಿಲಯಗಳ ಹಂತದಲ್ಲಿ |

– ರಾಜ್ಯ ಕಾರ್ಯದರ್ಶಿ

## ಶ್ರದ್ಧಾಂಜಲಿ



**ಶ್ರೀಮತಿ ಸುಶೀಲ ಗೋಪಾಲ್,** ಮಾಜಿ ರಾಜ್ಯ ಸ್ಥಾನಿಕ ಆಯುಕ್ತರು (ಗೈಡ್ಸ್) ಇವರು ಏಪ್ರಿಲ್ 21 ರಂದು ಬೆಂಗಳೂರಿನಲ್ಲಿ ನಿಧನರಾದರು ಇವರಿಗೆ 86 ವರ್ಷ ವಯಸ್ಸಾಗಿತ್ತು. ಇವರು ಗೈಡ್ ವಿಭಾಗದಲ್ಲಿ ಎ.ಎಲ್.ಟಿ ತರಬೇತಿಯನ್ನು ಪಡೆದಿದ್ದು, ಜಿಲ್ಲಾ, ರಾಜ್ಯ ಮಟ್ಟದ ಸಾಕಷ್ಟು ತರಬೇತಿಗಳಲ್ಲಿ ನಾಯಕಿಯಾಗಿ, ಸಿಬ್ಬಂದಿಯಾಗಿ ಕಾರ್ಯನಿರ್ವಹಿಸದ್ದರು. ಅಲ್ಲದೆ ರಾಜ್ಯ ಸಂಸ್ಥೆಯಿಂದ ಏರ್ಪಡಿಸಿದ್ದ ಸ್ಕೌಟ್ಸ್-ಗೈಡ್ಸ್‌ಗಳ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.

ಇವರು ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ಗೈಡ್ ವಿಭಾಗದ ಸಹಾಯಕ ಜಿಲ್ಲಾ ಆಯುಕ್ತರಾಗಿ ಮತ್ತು ಜಿಲ್ಲಾ ಆಯುಕ್ತರಾಗಿ ಹಲವಾರು ವರ್ಷಗಳು ಸೇವೆ ಸಲ್ಲಿಸಿದ್ದರು. ನಂತರ ರಾಜ್ಯ ಸಂಸ್ಥೆಯಲ್ಲಿ ಸ್ಥಾನಿಕ ಆಯುಕ್ತರಾಗಿ ಸೇವೆ ಸಲ್ಲಿಸಿದ್ದರು. ಸ್ಕೌಟ್-ಗೈಡ್ ಚಳವಳಿಯಲ್ಲಿ 25 ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದರು. ಇವರಿಗೆ ಅಂತರಾಷ್ಟ್ರೀಯ ಗೈಡ್ಸ್ ಸಂಸ್ಥೆಯಿಂದ "ಏಷ್ಯ ಪೆಸಿಫಿಕ್ ಪ್ರಶಸ್ತಿ"ಯನ್ನು ನೀಡಲಾಗಿತ್ತು.

ಇವರು ಒಬ್ಬ ಮಗ, ಮಗಳು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.



**ಶ್ರೀಮತಿ ಕೆ.ಪಿ. ಮಂದಾಕಿನಿ,** ನಿವೃತ್ತ ಶಿಕ್ಷಕಿ ಹಾಗೂ ಗೈಡ್ ಕ್ಯಾಪ್ಟನ್ ಇವರು ಫೆಬ್ರವರಿ 28 2023ರಂದು ಬೆಂಗಳೂರಿನಲ್ಲಿ ನಿಧನರಾದರು. ಇವರಿಗೆ 88 ವರ್ಷ ವಯಸ್ಸಾಗಿತ್ತು. ಇವರು ತುಮಕೂರು ಜಿಲ್ಲೆ ತಿಪಟೂರಿನ ಎಸ್.ಎಲ್.ಎಸ್.ಎಂ ಸಂಸ್ಥೆಯ ಪ್ರೌಢಶಾಲೆಯಲ್ಲಿ ನಾಲ್ಕು ದಶಕಗಳ ಕಾಲ ಗೈಡ್ ದಳವನ್ನು ಯಶಸ್ವಿಯಾಗಿ ನಡೆಸಿ ಸಾಕಷ್ಟು ಗೈಡ್‌ಗಳಿಗೆ ರಾಜ್ಯಪುರಸ್ಕಾರ ಮತ್ತು ರಾಷ್ಟ್ರಪತಿ ಪ್ರಶಸ್ತಿಗಳನ್ನು ಪಡೆಯಲು ಕಾರಣರಾಗಿದ್ದರು. ಇವರು ತಮ್ಮ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

– ರಾಜ್ಯ ಕಾರ್ಯದರ್ಶಿ

## ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ವಿವಿಧ ಜಿಲ್ಲೆಗಳಲ್ಲಿ ನಡೆದ ಬೇಸಿಗೆ ಶಿಬಿರದಲ್ಲಿ ಬನ್ನೀಸ್, ಕಬ್ಸ್-ಬುಲ್‌ಬುಲ್ಸ್ ಸ್ಕೌಟ್ಸ್-ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್‌ಗಳು ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿರುವುದು



ಬೆಂಗಳೂರು ಗ್ರಾಮಾಂತರ



ದಕ್ಷಿಣ ಕನ್ನಡ



ರಾಮನಗರ



ರಾಯಚೂರು



ಹಾವೇರಿ



ಹಾಸನ



ಕಾರವಾರ




ತುಮಕೂರು

Regd. as News Paper (Magazine) RNI No: 13348/1959. Postal Regd. No. KA/BGGPO/2580/2021-23
Licensed to Post Without Prepayment License No. PMG/BG/WPP-340/2021-2023.
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 32)

SHAHEEN
GROUP OF INSTITUTIONS

# ADMISSIONS OPEN

34 years of excellence

## COURSES OFFERED

- **PUC (Science)**
  Integrated with NEET/JEE
- **PUC (Arts)**
  Integrated with UPSC/CLAT
- **NEET Long Term**
  Repeaters Batch
- **B.A & B.Sc**
  Integrated with UPSC
- **Pre Cum Mains UPSC for Graduates**
  One Year
  Exclusive UPSC Course
- **Shaheen NEET Online**
  Download the App.
  **Shaheen Online**

**3000+**

Number of doctors are the Alumni of
**Shaheen College**

» Hostel Facility for Boys & Girls
» Scholarship for meritorious students

www.shaheengroup.org | **Toll Free: 1800 121 6235**
Head Office: Shaheen Nagar, BIDAR - 585403.

**If not delivered, please return to :**
**THE EDITOR, Karnataka Scout & Guide**
**State Headquarters, Shanthi Gruha**
**#39, Palace Road, Bengaluru - 560 001**
**Ph.: 080-22260017, 22267470**
**e-mail.: info@bsgkarnataka.org**
**shanthigruha@scout.org.in**
**www.bsgkarnataka.org**

Published by: The Bharat Scouts & Guides, Karnataka, State Headquarters
Shanthi Gruha #39, Palace Road, Bengaluru - 560 001. Publisher & Editor: K. Gangappa Gowda
Printed by: L. Lingappa, M.D. Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Rd, Bengaluru 26